ಸಂಸ್ಕೃತ - ಸಂಸ್ಕೃತಿ - ಸಂಪತ್ತು ಪುಸ್ತಕ ಮಾಲೆ ೨

ಮಹಾಕವಿ ಅಶ್ವಘೋಷ

ಪ್ರೊ॥ ಎಸ್.ಕೆ.ರಾಮಚಂದ್ರರಾವ್

ಎಂ.ಪಿ. ಬಿರ್ಲಾ ಪ್ರತಿಷ್ಠಾನ
ಬೆಂಗಳೂರು ಕೇಂದ್ರ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001

ಸಂಸ್ಕೃತ - ಸಂಸ್ಕೃತಿ - ಸಂಪತ್ತು ಪುಸ್ತಕ ಮಾಲೆ ೨

ಮಹಾಕವಿ ಅಶ್ವಘೋಷ

ಪ್ರೊ|| ಸಾ.ಕೃ.ರಾಮಚಂದ್ರರಾವ್

ಎಂ.ಪಿ. ಬಿರ್ಲಾ ಪ್ರತಿಷ್ಠಾನ

ಬೆಂಗಳೂರು ಕೇಂದ್ರ

ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001

Mahakavi Aswagosha - A book on the poet Aswagosha. Published by M.P. Birla Foundation, Bangalore Kendra, Race Course Road, Bangalore - 560 001.

Typeset : Viswas Services

Printed at : The Bangalore Press

Pages : 46

First Edition : April - 2000.

© Author

Price : Rs.

ಸಂಸ್ಕೃತ - ಸಂಸ್ಕೃತಿ - ಸಂಪತ್ತು ಪುಸ್ತಕ ಮಾಲೆ

ಎಂ.ಪಿ. ಬಿರ್ಲಾ ಪ್ರತಿಷ್ಠಾನದ ಬೆಂಗಳೂರು ಕೇಂದ್ರವು ಇದೊಂದು ಕನ್ನಡ ಪುಸ್ತಕಮಾಲೆಯನ್ನು ಆರಂಭಿಸಿದೆ. ಭಾರತೀಯವೇ ಎಂಬಂಥ ಸಾಂಸ್ಕೃತಿಕ ಮೌಲ್ಯಗಳು ಜನರಲ್ಲಿ ಬಿತ್ತರಗೊಳ್ಳಬೇಕೆಂಬುದು ಉದ್ದೇಶ. ವಿದ್ವಜ್ಜನರಿಗೆ ಮಾತ್ರ ಎಟುಕಬಲ್ಲ ಉದ್ಗ್ರಂಥಗಳು ಅನೇಕ ಇವೆ; ಇನ್ನೂ ಹೊರಬರುತ್ತಿವೆ. ಆದರೆ ಜನಸಾಮಾನ್ಯರ ಅಗತ್ಯವನ್ನೂ ಅಪೇಕ್ಷೆಯನ್ನೂ ಪೂರೈಸುವ ಕಿರುಹೊತ್ತಗೆಗಳನ್ನು ಪ್ರಕಟಿಸುವುದು ಈ ಪ್ರತಿಷ್ಠಾನದ ಸಂಕಲ್ಪ. ಎಲ್ಲರ ಕಿಸೆಗೂ ಒದಗುವ ಬೆಲೆಯಲ್ಲಿ, ಎಲ್ಲರ ಕಿಸೆಯೊಳಗೆ ಹೋಗುವ ಗಾತ್ರದಲ್ಲಿ ಈ ಪುಸ್ತಕಗಳಿರುತ್ತವೆ.

ಗಾತ್ರ ಕಿರಿದಾದರೂ, ಪ್ರಾಮಾಣಿಕತೆಯಲ್ಲಾಗಲಿ ಪ್ರಯೋಜನದಲ್ಲಾಗಲಿ ಕೊರತೆಯೇನು ಇರದಂತೆ ಎಚ್ಚರಿಕೆ ವಹಿಸಲಾಗುವುದು.

ಮೊದಲ ಮಾಲೆ ಸಂಸ್ಕೃತ ಭಾಷೆಯಲ್ಲಿರುವ ಸಾಂಸ್ಕೃತಿಕ ಸಂಪತ್ತನ್ನು ಕುರಿತದ್ದು. ಇದರಲ್ಲಿ ಐದಾರು ಸಾವಿರ ವರ್ಷಗಳಿಂದ ಬೆಳೆದು ಬಂದು, ನಾಡಿನ ಎಲ್ಲ ಪ್ರಾಂತಗಳ ಬದುಕು ಬರಹಗಳಿಗೆ ಪ್ರೇರಣೆಯನ್ನೂ ಸಾಮಗ್ರಿಯನ್ನೂ ಒದಗಿಸಿ, ಜನತೆಯ ಸಂಸ್ಕೃತಿಗೆ ಒತ್ತಾಸೆಯಾಗಿ, ಸಂಸ್ಕೃತ ವಾಙ್ಮಯದ ವಿಶಿಷ್ಟ ಘಟ್ಟಗಳನ್ನು ಗುರುತಿಸಲು ನೆರವಾಗುವ ಸಣ್ಣ ಸಣ್ಣ

ಪುಸ್ತಕಗಳು ಬೆಳಕು ಕಾಣುತ್ತವೆ, ಬಿಂದುವಿನಲ್ಲಿ ಸಿಂಧು ಎಂಬಂತೆ, ಹನಿಯಲ್ಲಿ ಹೊನಲು ಎಂಬಂತೆ.

ವೈದಿಕ ಸಾಹಿತ್ಯ, ರಾಮಾಯಣ, ಭಾರತ, ಭಾಗವತಗಳಲ್ಲದೆ ಅವುಗಳನ್ನಾಧರಿಸಿ ಅಥವಾ ಸ್ವತಂತ್ರವಾಗಿ ಮೈದಳೆದ ಕೃತಿಗಳ ಪರಿಚಯ ಈ ಮಾಲೆಯಿಂದ ದೊರಕುತ್ತದೆ. ಸಂಸ್ಕೃತದಲ್ಲೇ ಇರುವ ಮಹಾಕಾವ್ಯಗಳು, ಖಂಡಕಾವ್ಯಗಳು ಚಿತ್ರಕಾವ್ಯಗಳು, ಗದ್ಯಕಾವ್ಯಗಳು, ಹಲವು ಪ್ರಕಾರಗಳ (ವೈದಿಕ, ಜೈನ, ಬೌದ್ಧ) ಶಾಸ್ತ್ರ ಸಾಹಿತ್ಯ, ಆಗಮ, ದರ್ಶನ ಪ್ರಬಂಧಗಳು, ತಂತ್ರ ಗ್ರಂಥಗಳು ಸುಭಾಷಿತ ಮೊದಲಾದುವನ್ನು ತಿಳಿಯಾದ ನುಡಿಯಲ್ಲಿ, ಲಲಿತವಾದ ಶೈಲಿಯಲ್ಲಿ ಜನಸಾಮಾನ್ಯರಿಗೆ ಒದಗಿಸಿಕೊಡುವ ಪ್ರಯತ್ನ ಮಾಡಲಾಗುತ್ತದೆ.

ಸಂಸ್ಕೃತ - ಸಂಸ್ಕೃತಿ - ಸಂಪತ್ತು ಮಾಲೆಯ ಮೊದಲ ಹೂವಾಗಿ ಆದಿಕವಿ ವಾಲ್ಮೀಕಿಯನ್ನು ಕುರಿತಂತೆ ಒಂದು ಹೊತ್ತಗೆ ಬರುತ್ತಿದೆ. ಮುಂದೆ ಬರಲಿರುವುದು ವಾಲ್ಮೀಕಿಯ ನಂತರ, ಕಾಳಿದಾಸನಿಗೆ ಮೊದಲು, ಮಹಾಕವಿಯಾಗಿ ಮೆರೆದ ಅಶ್ವಘೋಷನ ಸೌಂದರನಂದ ಕಾವ್ಯವನ್ನು ಕುರಿತದ್ದು; ಅವನದ್ದೆ ಇನ್ನೊಂದು ಮಹಾಕಾವ್ಯವಾದ ಬುದ್ಧಚರಿತವನ್ನೂ ಪರಿಚಯಮಾಡಿಕೊಡಲಾಗುತ್ತದೆ. ಅನಂತರ ಜಯದೇವಕವಿಯ ಗೀತಗೊವಿಂದವನ್ನು ಕುರಿತು, ಭಾಸನ ನಾಟಕಗಳನ್ನು ಕುರಿತು, ಭರತಮುನಿಯ ನಾಟ್ಯಶಾಸ್ತ್ರವನ್ನು ಕುರಿತು, ಅಲಂಕಾರ ಶಾಸ್ತ್ರದ ವಿವಿಧ ಪ್ರಸ್ಥಾನಗಳನ್ನು ಕುರಿತು, ಭರ್ತೃಹರಿಯ ವಾಕ್ಯಪದೀಯವನ್ನು ಕುರಿತು, ದಿಙ್ನಾಗನ ಕುಂದಮಾಲೆಯನ್ನು ಕುರಿತು, ಕುಮಾರದಾಸನ ಜಾನಕೀಹರಣವನ್ನು ಕುರಿತು, ತಂತ್ರಶಾಸ್ತ್ರವನ್ನು ಕುರಿತು, ಹೀಗೆ ಮಾಲೆ ಮುಂದುವರಿಯುತ್ತದೆ.

ಈ ಸಾಹಿತ್ಯ ಸೇವಾಕಾರ್ಯವನ್ನು ಮಾಡಬೇಕೆಂದು ಅಪೇಕ್ಷಿಸಿ, ಪ್ರೋತ್ಸಾಹಿಸಿ ಹರಸಿರುವವರು ಎಂ.ಪಿ. ಬಿರ್ಲಾ ಪ್ರತಿಷ್ಠಾನದ ಮುಖ್ಯಸ್ಥರಾದ ಶ್ರೀಮತಿ ಪ್ರಿಯಂವದಾ ದೇವಿ ಬಿರ್ಲಾ.

ಈ ಯೋಜನೆಯನ್ನು ನಡೆಸಲು ಮಹನೀಯರಾದ ಪ್ರೊ||ಎಸ್.ಕೆ.ರಾಮಚಂದ್ರರಾಯರು ಒಪ್ಪಿಕೊಂಡದ್ದು ನಮ್ಮ ಭಾಗ್ಯ. ಇವರು ಬಹುಮುಖ ಪ್ರತಿಭೆಯುಳ್ಳವರು.

ವೇದಾವಾಙ್ಮಯ ಸಂಸ್ಕೃತ ಸಾಹಿತ್ಯ, ಕನ್ನಡ - ಇಂಗ್ಲೀಷು ಭಾಷೆಗಳ ಸಾಹಿತ್ಯ, ಎಲ್ಲವನ್ನೂ ಆಳವಾಗಿ ಅಧ್ಯಯನ ಮಾಡಿದಾರೆ. ಇವರು ನಿಜಕ್ಕೂ ವಿದ್ಯಾವಾರಿಧಿಯೆ.

ಬೆಂಗಳೂರು ಪ್ರೆಸ್ಸಿನ ಶ್ರೀ ಎಚ್.ಆರ್. ಅನಂತ್, ವಿದ್ಯಾಭವನದ ನನ್ನ ಸಹೋದ್ಯೋಗಿಗಳು ಶ್ರೀ ಎಚ್.ಎನ್. ಸುರೇಶ್, ಶ್ರೀ ದತ್ತಾತ್ರಿ ಇವರಿಗೆಲ್ಲ ಆಭಾರಿ. ಓದುಗರು ಇಂಥ ಉತ್ತಮ ಕೃತಿಗಳಿಂದ ಉಪಯೋಗ ಪಡೆಯಬೇಕು ಎಂಬುದೇ ಪ್ರತಿಷ್ಠಾನದ ಆಶಯ.

ಮತ್ತೂರು ಕೃಷ್ಣಮೂರ್ತಿ
ನಿರ್ದೇಶಕ
ಎಂ.ಪಿ. ಬಿರ್ಲಾ ಪ್ರತಿಷ್ಠಾನ
ಬೆಂಗಳೂರು.

ಪ್ರೊ|| ಸಾ.ಕೃ. ರಾಮಚಂದ್ರರಾವ್

ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಸಂಗೀತಕಲಾರತ್ನ, ವೇದಾಂತ-ನಿಧಿ ಪ್ರೊ|| ಸಾಲಿಗ್ರಾಮ ಕೃಷ್ಣ ರಾಮಚಂದ್ರರಾಯರು ಪಂಡಿತರ ಮನೆತನಕ್ಕೆ ಸೇರಿದವರು. ಎಳವೆಯಿಂದಲೇ ಸಂಸ್ಕೃತ ಸಾಹಿತ್ಯದ ಅಧ್ಯಯನಕ್ಕೆ ತೊಡಗಿ ಮುಂದೆ ಅಲಂಕಾರಶಾಸ್ತ್ರ, ವೇದಾಂತ ವಿಭಾಗಗಳಲ್ಲಿ ಪ್ರಾವೀಣ್ಯವನ್ನು ಗಳಿಸಿದರು. ಪ್ರಾಕೃತ, ಪಾಳಿ, ಟಿಬೆಟನ್, ಅಪಭ್ರಂಶ ಭಾಷೆಗಳ ಪರಿಚಯವನ್ನೂ ಪಡೆದುಕೊಂಡು ಅಲ್ಲಿನ ಮೌಲಿಕಗ್ರಂಥಗಳನ್ನು, ಮೂಲದಲ್ಲೇ ಅಧ್ಯಯನ ಮಾಡಿದವರು. ವೈದಿಕ ಸಾಹಿತ್ಯ, ಜೈನ, ಬೌದ್ಧ ಸಾಹಿತ್ಯ, ಸಿದ್ಧ ಸಂಪ್ರದಾಯ, ಆಗಮ, ತಂತ್ರಶಾಸ್ತ್ರ ಇವುಗಳಲ್ಲೂ ಧಾರಾಳವಾಗಿ ಕೈಯಾಡಿಸಿದ್ದಾರೆ.

ವೃತ್ತಿಯಲ್ಲಿ ಮನಃಶಾಸ್ತ್ರದ ಪ್ರಾಧ್ಯಾಪಕರಾಗಿದ್ದವರು (NIMHANS ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ); ಪ್ರಸ್ತುತ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿವೇಕಾನಂದ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ.

ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅನೇಕ ಉದ್ಗ್ರಂಥಗಳನ್ನು ರಚಿಸಿ ಪ್ರಸಿದ್ಧರಾದವರು. ಸಂಸ್ಕೃತದಲ್ಲಿ 'ಪೌರವವಿಜಯ'ವೆಂಬ

ನಾಟಕವೊಂದನ್ನೂ ಪಾಳಿಭಾಷೆಯಲ್ಲಿ 'ವಿಸುದ್ಧಿಮಗ್ಗ ವಿಭಾವನೀ' ಎಂಬ ಟೀಕಾಗ್ರಂಥವನ್ನೂ ಬರೆದಿದ್ದಾರೆ.

ಕರ್ನಾಟಕ ಸಂಗೀತದಲ್ಲಿ ಹೆಚ್ಚಿನ ಒಲವು; ವೀಣೆಯನ್ನು ಅಭ್ಯಾಸ ಮಾಡಿದ್ದಾರೆ. ಚಿತ್ರಕಾರರು, ಶಿಲ್ಪಿಗಳು; ಭರತಮುನಿಯ ನಾಟ್ಯಶಾಸ್ತ್ರ ವಿಚಾರವಾಗಿ ಅಧಿಕಾರದಿಂದ ಹೇಳಬಲ್ಲವರು. ತಮ್ಮ ಕಲಾಕೃತಿಗಳ ಪ್ರದರ್ಶನಗಳನ್ನೂ ನಡೆಸಿದ್ದಾರೆ; ಸಂಗೀತ ಸಮ್ಮೇಳನಗಳ ಅಧ್ಯಕ್ಷತೆಯನ್ನು ವಹಿಸಿದ್ದಾರೆ.

ಕರ್ನಾಟಕ ಸರ್ಕಾರದಿಂದ ೧೯೮೬ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದುಕೊಂಡವರು. ಸಂಗೀತನೃತ್ಯ ಅಕಾಡೆಮಿ, ಲಲಿತಕಲಾ ಅಕಾಡೆಮಿ ಮೊದಲಾದ ಸಂಸ್ಥೆಗಳಿಂದ ಪುರಸ್ಕೃತರು. Encyclopaedia Britannica, ಕನ್ನಡ ವಿಶ್ವಕೋಶ ಇವರಿಂದ ಪ್ರಬಂಧಗಳನ್ನು ಬರೆಯಿಸಿ ಬಳಸಿಕೊಂಡಿವೆ.

ಪ್ರಸ್ತುತ ಅವರು ಇಡೀ ಋಗ್ವೇದಕ್ಕೆ ಸಂಪ್ರದಾಯದ ಅರ್ಥವನ್ನು ನಿರೂಪಿಸುವ ಕೆಲಸದಲ್ಲಿ ತೊಡಗಿದ್ದು, 'ಋಗ್ವೇದದರ್ಶನ' ಎಂಬ ಮೂವತ್ತು ಸಂಪುಟಗಳ ಮಾಲೆಯನ್ನು ಇಂಗ್ಲೀಷಿನಲ್ಲಿ ಸಿದ್ಧಪಡಿಸುತ್ತಿದ್ದಾರೆ; ಈಗ ಈ ಮಾಲೆಯ ಐದು ಸಂಪುಟಗಳು ಕಲ್ಪತರು ರಿಸರ್ಚ್ ಅಕಾಡೆಮಿಯ ಮೂಲಕ ಪ್ರಕಟವಾಗಿವೆ .

ಅಶ್ವಘೋಷ

(ಟಿಬೆಟನ್ ಸೈಲೊಗ್ರಾಫ್ ಒಂದರಿಂದ)

(೧) ಪ್ರವೇಶ

ಸಂಸ್ಕೃತ ವಾಙ್ಮಯದಲ್ಲಿ ಎರಡು ಸಾವಿರವರ್ಷಗಳಷ್ಟು ಹಿಂದೆಯೇ ಕಾಳಿದಾಸನಂಥ ಮಹಾಕವಿಗೂ ಮಾರ್ಗದರ್ಶಿಯೆನಿಸಿ, ವಾಲ್ಮೀಕಿಯ ನಂತರ ಪೂರ್ವಸೂರಿಯೆನಿಸಿ ಮೆರೆದವನು ಅಶ್ವಘೋಷ. ಅವನ 'ಬುದ್ಧಚರಿತ'ವು ಸಂಸ್ಕೃತ ಕಾವ್ಯಪರಂಪರೆಯಲ್ಲಿ ನಾಂದೀಮುಖದಲ್ಲೇ ನಿಂತಿದೆ. ಅವನ ಗ್ರಂಥಗಳು ಚೀಣೀಭಾಷೆಗೂ, ಟಿಬೆಟನ್ ಭಾಷೆಗೂ ಪರಿವರ್ತನೆಗೊಂಡು ಏಳೆಂಟುನೂರು ವರ್ಷಗಳಷ್ಟು ಹಿಂದೆಯೇ ಉಳಿದಿವೆ. ಬೌದ್ಧ ಮಹಾಯಾನ ಪ್ರಸ್ಥಾನದ ಕಾರಣಪುರುಷರಲ್ಲಿ ಅಶ್ವಘೋಷ ಒಬ್ಬನು. ಚೀಣ ಮತ್ತು ಟಿಬೆಟ್ ದೇಶಗಳಲ್ಲಿ ಬಳಕೆಯಲ್ಲಿರುವ ಗುರುಪರಂಪರೆಯ ಪಟ್ಟಾವಳಿ ಇವನು ನಾಗಾರ್ಜುನ, ಆರ್ಯದೇವ ಇವರಿಗೂ ಪೂರ್ವ ಸೂರಿಯೆಂದು ತಿಳಿಸುತ್ತದೆ. ಚೀಣೀ ಸಾಹಿತ್ಯದಲ್ಲಿ ಅವನ ಜೀವನಚರಿತೆ ಪ್ರಸಿದ್ಧವಾದ ಗ್ರಂಥ. ಅವನು ಹೆಸರಾಂತ ದಾರ್ಶನಿಕ, ಪ್ರತಿಭಾವಂತನಾದ ಕವಿ, ಸಂಗೀತದಲ್ಲೂ ಎತ್ತಿದಕೈ ಆಗಿದ್ದವನು.

ಅಶ್ವಘೋಷನು ಕುಷಾಣರಾಜ ಕನಿಷ್ಕನ ಸಮಕಾಲಿಕನೆಂದೂ, ಮಿತ್ರನೆಂದೂ ಉಲ್ಲೇಖವಿದೆ. ಕನಿಷ್ಕನು ಪಟ್ಟಕ್ಕೆ ಬಂದದ್ದು ಕಿಸ್ತಶಕ ೧೨೫ರಲ್ಲಿ. ಅವನ ಸಾಮ್ರಾಜ್ಯವು ಕಾಶ್ಮೀರ, ಮಧ್ಯಭಾರತ, ಮಧ್ಯತುರ್ಕಿ-ಗಳನ್ನೊಳಗೊಂಡಿದ್ದಿತು. ಅವನ ರಾಜಧಾನಿ ಪುರುಷಪುರ (ಈಗಿನ ಪೆಶಾವರ್). ಕನಿಷ್ಕನ ಆದೇಶದಂತೆ ಕುಸುಮಪುರದಲ್ಲಿ ನಡೆದ ಬೌದ್ಧ ಮಹಾಸಂಗೀತಿಯಲ್ಲಿ ಇವನು ಪ್ರಮುಖ ಸ್ಥವಿರನಾಗಿದ್ದನಂತೆ. ಕನಿಷ್ಕನು ಮಗಧವನ್ನು ಮುತ್ತಿ, ಅಲ್ಲಿನ ಅರಸನನ್ನು ಸೋಲಿಸಿ, ಅವನ ಆಸ್ಥಾನದಲ್ಲಿದ್ದ ಅಶ್ವಘೋಷನನ್ನು ತನ್ನ ಆಸ್ಥಾನಕ್ಕೆ ಕರೆತಂದನೆಂದು ಪ್ರತೀತಿ.

ಇವನ ತೌರೂರು ಸಾಕೇತ, ಎಂದರೆ ಅಯೋಧ್ಯೆ. ತಾಯಿಯ ಹೆಸರು ಸುವರ್ಣಾಕ್ಷಿ. ಬೌದ್ಧಭಿಕ್ಷುವಾಗುವ ಮೊದಲು ಬ್ರಾಹ್ಮಣ; ವೈದಿಕವಿದ್ಯೆಯಲ್ಲಿ ಪಾರಂಗತನಾಗಿದ್ದ ಇವನಿಗೆ ಪ್ರವ್ರಜ್ಯಮಾಡಿಸಿದ ದೀಕ್ಷಾಗುರು ವಸುಮಿತ್ರ (ಪೂರ್ಣಯಶಸ್). ಈ ವಸುಮಿತ್ರನ ಗುರು ಪಾರ್ಶ್ವದೇವನೆನ್ನುವನು ಅಭಿಧರ್ಮಪಿಟಕಕ್ಕೆ ಮಹಾವಿಭಾಷವೆಂಬ ವ್ಯಾಖ್ಯಾನವನ್ನು ಬರೆದು ಪ್ರಸಿದ್ಧನಾಗಿದ್ದನು. ಅಶ್ವಘೋಷ ತನ್ನ 'ಸೂತ್ರಾಲಂಕಾರ'ದಲ್ಲಿ ಇವರಿಬ್ಬರನ್ನೂ ಸ್ಮರಿಸಿಕೊಂಡಿದ್ದಾನೆ. ಆಚಾರ್ಯ ಪಾರ್ಶ್ವನ ಬರವಣಿಗೆಯಲ್ಲಿ ಅಶ್ವಘೋಷನ ನೆರವು ವಿಶೇಷವಾಗಿದ್ದಿತು. ಇದಕ್ಕಾಗಿ ಅಶ್ವಘೋಷನು ಈಗಿನ ಕಾಬೂಲಿನಲ್ಲೇ ಕೊಂಚಕಾಲವಿದ್ದನು. ತನ್ನ ಗುರು ವಸುಮಿತ್ರನು ತನಗೆ ಪಾಠ ಮಾಡಿದ ನಿತ್ಯಾನಿತ್ಯ ವಸ್ತುವಿಚಾರವನ್ನು ಕುರಿತ 'ನಿರ್ಗ್ರಂಥ'ವೆಂಬ ಗ್ರಂಥವನ್ನು ರಚಿಸಿದನು. ಅಶ್ವಘೋಷನು ಬೌದ್ಧಭಿಕ್ಷುವಾದನಂತರ ದೇಶಾದ್ಯಂತವೂ ಪ್ರಸಿದ್ಧನಾದ. "ಅವನು ಪರಿಹರಿಸದ ಸಮಸ್ಯೆಯೇ ಇರಲಿಲ್ಲ; ಅವನು ನಿರಸನಮಾಡದಿದ್ದ ವಾದವೇ ಇರಲಿಲ್ಲ. ವಾಕ್ಯಾರ್ಥ ಮಾಡುವಾಗ ಬಿರುಗಾಳಿಯು ಪೊಳ್ಳು ಮರಗಳನ್ನು ಉರುಳಿಸುವಂತೆ ಎದುರಾಳಿಗಳನ್ನು ಸೋಲಿಸುತ್ತಿದ್ದನು" ಎಂದು ಟಿಬೆಟನ್ ಭಾಷೆಯಲ್ಲಿ ಅವನ ಜೀವನಚರಿತ್ರೆಯನ್ನು ಬರೆದವನು ನಿರೂಪಿಸಿದ್ದಾನೆ.

ಮಹಾಯಾನಂಪಂಥದ ದೃಷ್ಟಿಯನ್ನು ದೃಢಮಾಡಲು ಅಶ್ವಘೋಷ ಹಲವಾರು ಗ್ರಂಥಗಳನ್ನು ಬರೆದು, ಊರೂರು ತಿರುಗಿ, ಪ್ರವಚನಗಳನ್ನು ಮಾಡಿ, ಇತರ ಧರ್ಮದ ಶ್ರದ್ಧಾಳುಗಳನ್ನು ವಾದದಲ್ಲಿ ಸೆಣಸುತ್ತಿದ್ದನು,. ಇವನ ಪಾಂಡಿತ್ಯ, ಪ್ರೌಢಿಮೆ, ವಾಗ್ಮಿತೆಗಳು ದೇಶದಲ್ಲೆಲ್ಲ ಮನೆಮಾತಾಗಿದ್ದುವು. ಬೌದ್ಧವಾಙ್ಮಯದಲ್ಲಿ ಅವನು ಬರೆದ 'ಸೂತ್ರಾಲಂಕಾರಶಾಸ್ತ್ರ', 'ಮಹಾಯಾನ ಶ್ರದ್ಧೋತ್ಪಾದಶಾಸ್ತ್ರ', 'ಕರ್ಮಫಲಸಂಕ್ಷಿಪ್ತ ನಿರ್ದೇಶಸೂತ್ರ', 'ಜನ್ಮಾಂತರ ರಹಸ್ಯಸ್ಥಲಷಟ್ಕ', 'ವಜ್ರಸೂಚಿ', 'ಗಂಡೀಸ್ತೋತ್ರಗಾಥಾ' ಇವು ಯೋಗಾಚಾರ ಸಂಪ್ರದಾಯವನ್ನು ಪುಷ್ಟಿ ಮಾಡಿದುವು.

ಇವುಗಳಲ್ಲಿ 'ಸೂತ್ರಾಲಂಕಾರ ಶಾಸ್ತ್ರ' ಎಂಬುದು ಕುಮಾರಜೀವನ ಪ್ರಕಾರ ಮುಖ್ಯವಾದುದು. ಇದನ್ನು ಕುಮಾರಜೀವನು ಕ್ರಿಸ್ತಾಬ್ದ ೪೦೫ರಂದು ಚೀಣೀಭಾಷೆಗೆ ಅನುವಾದ ಮಾಡಿದನು. ಮೂಲ ಸಂಸ್ಕೃತಗ್ರಂಥ ಇಂದು ಉಪಲಬ್ಧವಿಲ್ಲ. ಅನುವಾದದಿಂದ ಇದು ಗದ್ಯಪದ್ಯ ಮಿಶ್ರವಾದುದೆಂದೂ, ಅವದಾನ, ಜಾತಕ ಕಥೆಗಳು ಮೊದಲಾದವುಗಳ ಸಂಕಲನವೆಂದೂ ತಿಳಿದುಬರುತ್ತದೆ. ಇದಕ್ಕೆ 'ಕಲ್ಪನಾಮಂಡತಿಕಾ' ಎಂಬ ಇನ್ನೊಂದು ಹೆಸರೂ ಇದೆ. 'ಗಂಡೀಸ್ತೋತ್ರಗಾಥಾ' ಎಂಬ ಅವನ ಇನ್ನೊಂದು ಗ್ರಂಥವು ಸ್ರಗ್ಧರಾವೃತ್ತದ ಇಪ್ಪತ್ತೊಂಬತ್ತು ಶ್ಲೋಕಗಳಲ್ಲಿ ಬುದ್ಧನನ್ನು ಕುರಿತ ಪ್ರಶಸ್ತಿ ಕಾವ್ಯ. ಮೂಲಸಂಸ್ಕೃತವು ನಷ್ಟವಾಗಿದ್ದು, ಚೀಣೀ ಅನುವಾದದ ಆಧಾರದ ಮೇಲೆ ಮತ್ತೆ ಸಂಸ್ಕೃತದಲ್ಲಿ ಒಡಮೂಡಿದೆ. ಇದನ್ನು ಅಶ್ವಘೋಷನು ಕಾಶ್ಮೀರದಲ್ಲಿ ರಚಿಸಿದ ಉಲ್ಲೇಖವಿದೆ.

ಇವನ್ನು ನೋಡಿದಾಗ ಅವನು ಸರ್ವಾಸ್ತಿವಾದವೆಂಬ ಹೀನಯಾನಪಂಥಕ್ಕೆ ಸೇರಿದ್ದಂತೆ ತೋರುತ್ತದೆ. ಆದರೆ ಅವನ 'ಮಹಾಯಾನ ಶ್ರದ್ಧೋತ್ಪಾದ ಶಾಸ್ತ್ರ'ವು ಮಹಾಯಾನ ಪಂಥವನ್ನೆ ಎತ್ತಿ ಹಿಡಿಯುವ ಗ್ರಂಥ. ಅವನು ಯಾವಾಗ, ಹೇಗೆ ಮಹಾಯಾನಕ್ಕೆ ಒಲಿದನೋ ತಿಳಿದುಬರುವುದಿಲ್ಲ. 'ಮಹಾಯಾನ ಶ್ರದ್ಧೋತ್ಪಾದ'ವೂ ಸಂಸ್ಕೃತ ಮೂಲದಲ್ಲಿ ಇಂದು ಉಪಲಬ್ಧವಿಲ್ಲ; ಚೀಣೀ ಅನುವಾದವೇ ಉಳಿದಿರುವುದು. ಅಶ್ವಘೋಷನ ಕೀರ್ತಿ ಚೀಣಾ ಮತ್ತು ಟಿಬೆಟ್ ದೇಶಗಳಲ್ಲಿ ತುಂಬ ಹಿಂದಿನಿಂದ ಉಳಿದು ಬಂದಿದೆ. ಕ್ರಿಸ್ತಾಬ್ದ ೩೮೪ರಿಂದ ೪೧೭ರವರೆಗೆ ಚೀಣಾ ದೇಶವನ್ನಾಳಿದ ಯಾವೋ - ಟವಿನ್ ಅರಸುವಂಶದವರ ಕಾಲದಲ್ಲಿ, ಸುಮಾರು ೪೦೧ರಲ್ಲಿ, ಭಾರತೀಯ ಭಿಕ್ಷು ಕುಮಾರಜೀವನು ಅಶ್ವಘೋಷನ ಜೀವನ ಚರಿತ್ರೆಯನ್ನು ಸಂಸ್ಕೃತದಿಂದ ಚೀಣೀಭಾಷೆಗೆ ಅನುವಾದ ಮಾಡಿದನು. ಅದರಲ್ಲಿ ಅಶ್ವಘೋಷನು ಸಾಧಿಸಿದ ಧರ್ಮಪುನರುಜ್ಜೀವನ ಕಾರ್ಯದ ಪ್ರಸ್ತಾಪವಿದೆ. ಕ್ರಿಸ್ತಾಬ್ದ ೬೭೧ರಲ್ಲಿ ನಮ್ಮ ದೇಶಕ್ಕೆ ಪ್ರವಾಸಿಯಾಗಿ ಬಂದ ಇತ್ಸಿಂಗನೂ ಇದನ್ನು ಹೇಳಿದ್ದಾನೆ. ●

(೨) ಬುದ್ಧಚರಿತೆ

ಕೇವಲ ಧಾರ್ಮಿಕ ಗ್ರಂಥಗಳಲ್ಲದೆ ಕೆಲವು ಕಾವ್ಯಗಳನ್ನೂ ಅಶ್ವಘೋಷನು ಬರೆದಿದ್ದಾನೆ. 'ಬುದ್ಧಚರಿತ', 'ಸೌಂದರನಂದ' ಮತ್ತು 'ಶಾರಿಪುತ್ರಪ್ರಕರಣ' ಇವು ಮೂರೂ ಅವನವೇ. 'ಬುದ್ಧಚರಿತ'ದ ಉಪಲಬ್ಧವಾಗಿರುವ ಸಂಸ್ಕೃತಪಾಠ ಹದಿನೇಳು ಸರ್ಗಗಳ, ೧೩೬೮ ಶ್ಲೋಕಗಳ, ಮಹಾಕಾವ್ಯ. ಇದರ ಹದಿಮೂರು ಸರ್ಗಗಳನ್ನು ಅಮೃತಾನಂದನೆಂಬ ಕವಿ ಬರೆದನೆಂದೂ ಹೇಳುತ್ತಾರೆ. ಆದರೆ ಚೀಣ ಮತ್ತು ಟಿಬೆಟ್ ದೇಶಗಳಲ್ಲಿ ಇದು ೨೮ ಸರ್ಗಗಳ, ಮೂರು ಸಾವಿರ ಶ್ಲೋಕಗಳ ಕಾವ್ಯವೆಂದು ನಂಬಿಕೆ. ಕ್ರಿಸ್ತಾಬ್ದ ೪೧೪ರ ಸುಮಾರಿಗೆ ಸಂಘವರ್ಮ ಧರ್ಮಾಕ್ಷರನೆಂಬ ಭಾರತೀಯ ಭಿಕ್ಷುವು 'ಬುದ್ಧಚರಿತ'ವನ್ನು ಸಂಸ್ಕೃತ ಮೂಲದಿಂದ ಚೀಣೀಭಾಷೆಗೆ ಪರಿವರ್ತಿಸಿದನು. ಏಳೆಂಟನೆಯ ಶತಮಾನಗಳಲ್ಲಿ ಟಿಬೆಟನ್ ಅನುವಾದವು ಸಿದ್ಧವಾಯಿತು. ಈ ಎರಡೂ ಅನುವಾದಗಳಲ್ಲಿ ಕಾವ್ಯವು ಬುದ್ಧನ ಪರಿನಿರ್ವಾಣದವರೆಗೂ ಸಾಗಿಬರುತ್ತದೆ.

ಪರಿನಿರ್ವಾಣವಾದನಂತರ ಒದಗಿದ ಕಲಹ, ಬುದ್ಧನ ನೇರಶಿಷ್ಯರು ನಡೆಸಿದ ಮೊದಲ ಸಂಗೀತಿ, ಮತ್ತು ಅಶೋಕನ ರಾಜ್ಯಭಾರ ಇವೂ ಪ್ರಸ್ತಾಪಕ್ಕೆ ಬಂದಿವೆ. ಆದರೆ ಉಪಲಬ್ಧವಿರುವ ಸಂಸ್ಕೃತಗ್ರಂಥ ಸಂಬೋಧಿಯವರೆಗೆ ಬಂದು ನಿಂತಿದೆ. ಬುದ್ಧನ ಜನ್ಮ, ಅಂತಃಪುರವಿಹಾರ, ಒದಗಿದ ವೈರಾಗ್ಯ (ಸಂವೇಗೋತ್ಪತ್ತಿ), ಮನೆಯಿಂದ ಹೊರಟುಹೋದುದು (ಅಭಿನಿಷ್ಕ್ರಮಣ), ರಾತ್ರಿ ಹೊರಟು ಕಂಥಕನನ್ನು ವಿಸರ್ಜಿಸಿದ್ದು, ತಪೋವನ ಪ್ರವೇಶ, ಅಂತಃ ಪುರವಿಲಾಪ, ಸಂಬೋಧಿಪ್ರಾಪ್ತಿ ಇವು ವರ್ಣನೆಗೆ ಬಂದಿವೆ.

ಇದರ ಕಾವ್ಯಗುಣ ಅದ್ಭುತವಾದುದು. ಕೇವಲ ಧರ್ಮವನ್ನು ರಸದ ಚೌಕಟ್ಟಿನಲ್ಲಿ ಮೂಡಿಸಿರುವ ಜಾಣ್ಮೆ, ಪ್ರೌಢಿಮೆ ಅಸಾಧಾರಣ.



ಚಿತ್ರ 2

ಮಹಾಕಾವ್ಯದಲ್ಲಿ ಸಾಮಾನ್ಯವಾಗಿ ಕಾಣಸಿಗುವ ಅತಿಶಯೋಕ್ತಿ, ಉಕ್ತಿಚಮತ್ಕಾರ, ದೀರ್ಘವರ್ಣನೆ ಇವು ಯಾವುವೂ ಇಲ್ಲದೆ, ಸಹಜ, ಸರಳ, ಸುಂದರವಾದ ನಿರೂಪಣೆ; ಇಲ್ಲಿನ ಕಲ್ಪನಾಚಾತುರ್ಯವೂ ವಿಶೇಷವಾದುದು. ಸಣ್ಣ ಸಣ್ಣ ಸಮಾಸಗಳು, ಕ್ಲಿಷ್ಟತೆಯಿರದ ವ್ಯಾಕರಣ, ಲಘುಛಂದಸ್ಸು. ಕಾಳಿದಾಸನು ತನ್ನ 'ರಘುವಂಶ', 'ಕುಮಾರಸಂಭವ' ಕಾವ್ಯಗಳಲ್ಲಿ ಇಲ್ಲಿನ ಅನೇಕ ಉಪಮೆಗಳನ್ನೂ, ಕವಿಸಮಯಗಳನ್ನೂ, ಕಲ್ಪನೆಗಳನ್ನೂ ಬಳಸಿಕೊಂಡಿದ್ದಾನೆ.

ಬುದ್ಧನಾಗುವ ಮೊದಲು, ಅಭಿನಿಷ್ಕ್ರಮಣಕ್ಕೆ ಮುಂಚೆ, ರಾಜಕುಮಾರನನ್ನು ರಥದಲ್ಲಿ ಕೂರಿಸಿಕೊಂಡು ಸೂತನು ನಗರಪ್ರದಕ್ಷಿಣೆ ಮಾಡುತ್ತಿರುವಾಗಲ್ಲವೆ ರಾಜಕುಮಾರನು ಮುಪ್ಪು, ಬೇನೆ, ಸಾವು ಇವುಗಳನ್ನು ಕಂಡು ವೈರಾಗ್ಯವನ್ನು ತಳೆದದ್ದು? ಅದೇ ಅಲ್ಲವೆ ಸಂವೇಗೋತ್ಪತ್ತಿಯ ಸಂದರ್ಭ? ಆಗ ಮುದುಕನೊಬ್ಬನನ್ನು ಕಂಡಾಗ ರಾಜಕುಮಾರನು ಅಚ್ಚರಿಗೊಂಡು ಸೂತನನ್ನು ಕೇಳುತ್ತಾನೆ (೩, ೨೮) :

'ಕ ಏಷ ಭೋಃ ಸೂತ ನರೋಽಭ್ಯುಪೇತಃ
ಕೇಶೈಃ ಸಿತೈರ್ಯಷ್ಟಿವಿಷಕ್ತಹಸ್ತಃ
ಭ್ರೂ ಸಂವೃತಾಕ್ಷಃ ಶಿಥಿಲಾನತಾಂಗಃ
ಕಿಂ ವಿಕ್ರಿಯೈಷಾ ಪ್ರಕೃತಿರ್ಯದೃಚ್ಛಾ

"ಎಲೆ ಸೂತನೆ, ಯಾರಿವನು? ತಲೆಗೂದಲೆಲ್ಲ ಬೆಳ್ಳಗಾಗಿದೆ; ಕೋಲೂರಿಕೊಂಡು ನಡೆಯುತ್ತಿದ್ದಾನೆ, ಕಣ್ಣುಗಳು ಗುಳಿಬಿದ್ದು ಹುಬ್ಬುಗಳೇ ಕಾಣುತ್ತಿವೆ; ಮೈಯೆಲ್ಲ ಸವೆದು ಸೊರಗಿಹೋಗಿದೆ. ಬೆನ್ನು ಬಾಗಿಬಿಟ್ಟಿದೆ. ಇದೇನು ಆಕಸ್ಮಿಕವಾದ ವಿಕಾರವೋ? ಅಥವಾ ಇವನು ಇರುವುದೇ ಹೀಗೋ?"

ಅಲ್ಲಿಯವರೆಗೆ ರಾಜಕುಮಾರನು ಮುಪ್ಪೆಂಬುದನ್ನು ಕಂಡೇ ಇರಲಿಲ್ಲ. ಆಗ ಸೂತನು ಅವನಿಗೆ ರೂಪವನ್ನು ಕೆಡಿಸಿ, ಬಲವನ್ನು ಕುಗ್ಗಿಸಿ, ದುಃಖಕ್ಕೆ

ಕಾರಣವಾಗಿ, ಸುಖಿಗಳಿಗೆ ಸಾವಾಗಿ, ನೆನಪನ್ನು ತೊಲಗಿಸಿ, ಇಂದ್ರಿಯ-ಪಾಟವಕ್ಕೆ ಶತ್ರುವಾದ ಮುಪ್ಪನ್ನು ವರ್ಣಿಸುತ್ತಾನೆ. ಒಮ್ಮೆ ಈ ಮುದುಕನೂ ಮಗುವಾಗಿದ್ದವನೆ, ಮೊಲೆ ಹಾಲು ಕುಡಿಯುತ್ತಿದ್ದವನೆ; ಮುಂದೆ ತರುಣನಾಗಿ ಸುಂದರನಾಗಿದ್ದವನೆ; ಅವನೇ ಕಾಲಕ್ರಮದಲ್ಲಿ ಮುಪ್ಪಡರಿ ಹೀಗಾಗಿದ್ದಾನೆಂದು ತಿಳಿಸುತ್ತಾನೆ.

'ರೂಪಸ್ಯ ಹಂತ್ರೀ ವ್ಯಸನಂ ಬಲಸ್ಯ
ಶೋಕಸ್ಯ ಯೋನಿರ್ನಿಧನಂ ರತೀನಾಂ
ನಾಶಃ ಸ್ಮೃತೀನಾಂ ರಿಪುರಿಂದ್ರಿಯಾಣಾಂ
ಏಷಾ ಜರಾ ನಾಮ ಯಯೈಷ ಭಗ್ನಃ
ಪೀತಂ ಹ್ಯನೇನಾಪಿ ಪಯಃ ಶಿಶುತ್ವೇ
ಕಾಲೇನ ಭೂಯಃ ಪರಿಮೃಷ್ಟಮುರ್ವ್ಯಾಂ
ಕ್ರಮೇಣ ಭೂತ್ವಾ ಚ ಯುವಾ ವಪುಷ್ಮಾನ್
ಕ್ರಮೇಣ ತೇನೈವ ಜರಾಮುಪೇತಃ

ಚಿತ್ರ 3

(೩) ಶಾರಿಪುತ್ರಪ್ರಕರಣ

'ಶಾರಿಪುತ್ರಪ್ರಕರಣ'ವೆಂಬ ಸಂಸ್ಕೃತ ನಾಟಕದ ಕೆಲವು ತುಣುಕುಗಳು ಮಾತ್ರ ನಮ್ಮವರೆಗೆ ಉಳಿದುಬಂದಿವೆ. ಲ್ಯೂಡರ್ಸ್ ಎಂಬ ವಿದ್ವಾಂಸರು ೧೯೧೧ರಲ್ಲಿ ತುಫಾನ್ ಪ್ರದೇಶದ ಅವಶೇಷಗಳಿಂದ ಈ ತುಣುಕುಗಳಿದ್ದ ತಾಳಪತ್ರಗಳನ್ನು ಹೊರತೆಗೆದರು.

ಒಂಬತ್ತು ಅಂಕಗಳದ್ದು ಈ ನಾಟಕ. ಇದರಲ್ಲಿ ಬುದ್ಧನ ಪ್ರಮುಖ ಶಿಷ್ಯರಾಗಿದ್ದ ಶಾರಿಪುತ್ರ ಮತ್ತು ಮೌದ್ಗಲ್ಯಾಯನರು ಬೌದ್ಧಧರ್ಮಕ್ಕೆ ಒಲಿದ ಪ್ರಸಂಗ ಬರುತ್ತದೆ. ಶಾರಿಪುತ್ರನು ಬ್ರಾಹ್ಮಣ; ಅವನೊಮ್ಮೆ ಅಶ್ವಜಿತನೆಂಬ ಬೌದ್ಧಭಿಕ್ಷುವಿನ ಪರಿಚಯವನ್ನು ಪಡೆದುಕೊಂಡು ಪ್ರಭಾವಿತನಾದ. ಇದನ್ನು ತನ್ನ ಸ್ನೇಹಿತನೊಂದಿಗೆ ಮಾತನಾಡುತ್ತ ಇದ್ದಾಗ ಪ್ರಸ್ತಾಪಮಾಡಲಾಗಿ, ಅವನು 'ನೀನು ಬ್ರಾಹ್ಮಣ, ಕ್ಷತ್ರಿಯನೊಬ್ಬನ ಉಪದೇಶವನ್ನು ಪಡೆದುಕೊಳ್ಳಬೇಕೆ?' ಎನ್ನಲು, ಶಾರಿಪುತ್ರನು "ಗುಣಪಡಿಸುವ ಮದ್ದನ್ನು ಯಾರು ಕೊಟ್ಟರೇನು? ಬಾಯಾರಿಕೆಯನ್ನು ತಣಿಸುವ ನೀರನ್ನು ಕೊಡುವವರು ಯಾರಾದರೇನು?" ಎಂದುತ್ತರವಿತ್ತ. ಅಶ್ವಜಿತನಿಂದ ಬೌದ್ಧಧರ್ಮದ ತಿರುಳನ್ನು ತಿಳಿದಮೇಲೆ ಶಾರಿಪುತ್ರನ ಮುಖದಲ್ಲಿ ಅಪೂರ್ವವಾದ ಶಾಂತಿಯ ಕಳೆ ಒಡಮೂಡಿತು. ಇದನ್ನು ಕಂಡ ಅವನ ಮಿತ್ರ ಮೌದ್ಗಲ್ಯಾಯನನು ಇದಕ್ಕೆ ಕಾರಣವೇನೆಂದು ಕೇಳಲು ಶಾರಿಪುತ್ರನು ಬುದ್ಧನ ಉಪದೇಶದ ಸಾರವನ್ನು ತಿಳಿಸಿದನು. ಮೌದ್ಗಲ್ಯಾಯನನೂ ಬ್ರಾಹ್ಮಣನೇ; ಆದರೆ ಬುದ್ಧನ ಸಂದೇಶ ಅವನಿಗೂ ಮೆಚ್ಚುಗೆಯಾಯಿತು. ಇಬ್ಬರೂ ಒಡಗೂಡಿ ಬುದ್ಧನ ಬಳಿ ಹೋಗಿ ಅವನಿಂದ ನೇರವಾಗಿ ಧರ್ಮದೀಕ್ಷೆಯನ್ನು ಪಡೆದುಕೊಂಡರು. ಇದು ಈ ನಾಟಕದ ವಸ್ತು.

ಈ ನಾಟಕದ ತಾಳಪತ್ರಗಳು ದೊರತಲ್ಲೇ ಇನ್ನೊಂದು ನಾಟಕದ ಪ್ರತಿಯೂ ಇದ್ದಿತು. ಇದರಲ್ಲಿ ಅಶ್ವಘೋಷನ ಹೆಸರಿಲ್ಲವಾದರೂ ಅವನದ್ದೇ ಎಂದು ನಿರ್ಧರಿಸಲು ಎಡೆಯಿದೆ. ಇದೊಂದು ಪ್ರತೀಕನಾಟಕ; ಶಾಂತರಸ ಪ್ರಧಾನವಾದುದು. ಪಾತ್ರಗಳಲ್ಲಿ ಬುದ್ಧನೂ ಸೇರುತ್ತಾನೆ; ಉಳಿದವರು ರತಿ, ಮತಿ ಮುಂತಾದವರು. ಈ ಬಗೆಯ ಸಾಂಕೇತಿಕ ನಾಟಕಗಳಿಗೆ ಇದೇ ನಾಂದಿಯಿದ್ದೀತು.

ಅಶ್ವಘೋಷನದ್ದೇ 'ರಾಷ್ಟ್ರಪಾಲ' ಎಂಬ ಹೆಸರಿನ ಇನ್ನೊಂದು ನಾಟಕವಿರುವುದು ಜೈನ ಸಂಪ್ರದಾಯದ 'ನ್ಯಾಯವಿನಿಶ್ಚಯವಿವರಣ'ವೆಂಬ ಗ್ರಂಥದಿಂದ ತಿಳಿದುಬರುತ್ತದೆ. 'ನ್ಯಾಯವಿನಿಶ್ಚಯ'ವನ್ನು ರಚಿಸಿದವನು ಅಕಲಂಕ; ಅದರ ಟೀಕೆಯಾದ 'ವಿವರಣ'ವು ವಾದಿರಾಜಸೂರಿಯದು. ವಾದಿರಾಜಸೂರಿಯು ಧರ್ಮಕೀರ್ತಿಯೆಂಬ ಬೌದ್ಧದಾರ್ಶನಿಕನ ಮಾತುಗಳಲ್ಲಿ ಅಶ್ವಘೋಷನ ಈ ನಾಟಕವನ್ನು ಉಲ್ಲೇಖಿಸಿದ್ದಾನೆ. ಈ ಮಾತುಗಳು ಧರ್ಮಕೀರ್ತಿಯ 'ವಾದನ್ಯಾಯ'ವೆಂಬ ಗ್ರಂಥದಲ್ಲಿರುವುದನ್ನು ಶಾಂತಿನಿಕೇತನದ ವಿಧುಶೇಖರ ಭಟ್ಟಾಚಾರ್ಯರು ಗುರುತಿಸಿದ್ದಾರೆ. ಧರ್ಮಕೀರ್ತಿಯ ಮಾತುಗಳು ಹೀಗಿವೆ -

'ಆತ್ಮನಿ ವಿವಾದೇ ನಾಸ್ತೀತಿ ವಯಂ ಬೌದ್ಧಾಃ'

(ಆತ್ಮದ ವಿಚಾರವಾಗಿ, ನಾವು ಬೌದ್ಧರು ಆತ್ಮನಿಲ್ಲವೆಂದೇ ಹೇಳುತ್ತೇವೆ)

'ಕೇ ಬೌದ್ಧಾಃ'

(ಬೌದ್ಧರೆಂದರೆ ಯಾರು?)

'ಯೇ ಬುದ್ಧಶಾಸನಮುಪಗತಾಃ'

(ಯಾರು ಬುದ್ಧನ ಧರ್ಮದಲ್ಲಿ ತೊಡಗಿರುವರೋ ಅವರು.)

'ಕೋ ಬುದ್ಧಃ'

(ಬುದ್ಧನೆಂದರೆ ಯಾರವನು?)

'ಯಸ್ಯ ಶಾಸನೇ ಭದಂತಾಶ್ವಘೋಷಃ ಪ್ರವ್ರಜಿತಃ'

(ಯಾರ ಶಾಸನದಲ್ಲಿ ಆಚಾರ್ಯ ಅಶ್ವಘೋಷನು ಸಂಸಾರವನ್ನು ತೊರೆದು ಸಂನ್ಯಾಸಿಯಾದನೋ ಅವನೇ ಬುದ್ಧ.)

'ಕೋ ಪುನರ್ಭದಂತಾಶ್ವಘೋಷಃ?'

(ಮತ್ತೆ ಈ ಆಚಾರ್ಯ ಅಶ್ವಘೋಷನು ಯಾರು?)

'ಯಸ್ಯ ರಾಷ್ಟ್ರಪಾಲಂ ನಾಮ ನಾಟಕಂ?'

(ಯಾರು ರಾಷ್ಟ್ರಪಾಲವೆಂಬ ನಾಟಕವನ್ನು ಬರೆದಿದ್ದಾನೋ ಅವನು)

'ಕೀದೃಶಂ ಚ ನಾಟಕಂ?'

(ಈ ನಾಟಕವಾದರೂ ಎಂಥದು?)

'ಇತಿ ಪ್ರಸಂಗಮಾರಚಯ್ಯ "ನಾಂದ್ಯಂತೇ ತತಃ ಪ್ರವಿಶತಿ ಸೂತ್ರಧಾರಃ" ಇತ್ಯಾರಭ್ಯ ಪಠತಿ ನೃತ್ಯತಿ ಗಾಯತಿ ಚ, ಅಪರಸ್ಯ ವ್ಯಾಮೋಹನಂ ಅನುವಾದೇ ಶಕ್ತಿಘಾವಾತಂ ಚ ಕರ್ತುಮಿತಿ, ತದಪಿ ವಾದಿನಾಂ ನಿಗ್ರಹಂ ಅಪ್ರಸ್ತುತಾಭಿಧಾನಾತ್.'

(ಇದೊಂದು ಹಿನ್ನೆಲೆಯನ್ನು ಕಾಣಿಸಿ, "ನಾಂದಿಯ ಕೊನೆಯಲ್ಲಿ ಸೂತ್ರಧಾರನು ಬರುತ್ತಾನೆ" ಎಂಬ ಒಕ್ಕಣೆಯಿಂದ ಮಾತನಾಡುವುದು, ಕುಣಿಯುವುದು, ಹಾಡುವುದು ಮೊದಲಾಗುತ್ತವೆ. ಪ್ರಾಸಂಗಿಕವಾಗಿ ವಾದ, ವಿವಾದ, ವಾದಿನಿರಸನ ಮೊದಲಾದುವು ಬರುತ್ತವೆ.)

ಈ ನಾಟಕವೇನೋ ಉಪಲಬ್ಧವಿಲ್ಲ. ಪಾಳಿತ್ರಿಪಿಟಕದ ಮಜ್ಝಿಮನಿಕಾಯದಲ್ಲಿ ಸೇರಿರುವ 'ರಟ್ಠಪಾಲಸುತ್ತ' ಎಂಬುದು ಇವರ ಮೂಲಸಾಮಗ್ರಿಯಿದ್ದೀತು.

(೪) ಸೌಂದರನಂದ

'**ಸೌ**ಂದರನಂದ' ಹದಿನೆಂಟು ಸರ್ಗಗಳ ಕಾವ್ಯ. ೧೯೧೦ರಲ್ಲಿ ಮಹಾಮಹೋಪಾಧ್ಯಾಯ ಹರಪ್ರಸಾದಶಾಸ್ತ್ರಿಗಳು ಇದನ್ನು ಸಂಪಾದಿಸಿ, ಪ್ರಕಟಿಸುವವರೆಗೂ ಈ ಕಾವ್ಯದ ಪರಿಚಯ ಯಾರಿಗೂ ಇರಲಿಲ್ಲ. ಬುದ್ಧನ ಮಲತಮ್ಮ ನಂದನೆಂಬುವನು ಮನಸ್ಸಿಲ್ಲದ ಮನಸ್ಸಿನಿಂದ ಭಿಕ್ಷುವಾದುದು ಈ ಕಾವ್ಯದ ವಸ್ತು. ಪಾಳಿವಾಙ್ಮಯದ ಮಹಾವಗ್ಗದಲ್ಲಿ ನಂದನು ಇಷ್ಟವಿಲ್ಲದಿದ್ದರೂ ಪ್ರವ್ರಜಿತನಾದ ಪ್ರಸಂಗದ ಪ್ರಸ್ತಾಪವಿದೆ. ಇಷ್ಟರಮೇಲೆ ಕವಿಯು ತನ್ನ ಪ್ರತಿಭೋದ್ಭವವಾದ ಕಲ್ಪನಾಜಾಲವನ್ನು ನಿರ್ಮಿಸಿದ್ದಾನೆ. 'ಸೌಂದರನಂದ' ತುಂಬ ಸುಂದರವಾದ ಕಾವ್ಯ. ಭಾವಸಂಪತ್ತಿ, ವಚೋವಿನ್ಯಾಸ ಎರಡೂ ಪರಸ್ಪರಪೂರಕವಾಗಿ ಬಂದಿವೆ.

ಮೊದಲು ರಾಜಕುಮಾರನು ಅರಮನೆಯಿಂದ ಹೊರಟದ್ದನ್ನು ತಿಳಿದ ಅಂತಃಪುರದ ಹೆಂಗಳೆಯರು, ಅವನನ್ನು ನೋಡಲು ಹಾತೊರೆದು ಸೇರುವುದು. (೩, ೧೩)

'ತತಃ ಕುಮಾರಃ ಖಲು ಗಚ್ಛತೀತಿ
ಶ್ರುತ್ವಾ ಸ್ತ್ರಿಯಃ ಪ್ರೇಷ್ಯಜನಾತ್ ಪ್ರವೃತ್ತಿಂ
ದಿದೃಕ್ಷಯಾ ಹರ್ಮ್ಯತಲಾನಿ ಜಗ್ಮು-
ರ್ಜನೇನ ಮಾನ್ಯೇನ ಕೃತಾಭ್ಯನುಜ್ಞಾಃ

ನಿರೂಪಣೆ ಎಷ್ಟು ಸಹಜ ಸುಂದರವಾಗಿದೆ ನೋಡಿ.

ಮುಂದೆ, ಬುದ್ಧನ ಮಾತು ಎಷ್ಟು ಸರಳವೆಂಬುದನ್ನು ಕಾಣುವೆವು (೪, ೮೫) -

'ನಾವಜಾನಾಮಿ ವಿಷಯಾನ್ ಜಾನೇ ಲೋಕಂ ತದಾತ್ಮಕಂ
ಅನಿತ್ಯಂ ತು ಜಗನ್ಮತ್ವಾ ನಾತ್ರ ಮೇ ರಮತೇ ಮನಃ'

"ಇಂದ್ರಿಯಗಳಿಗೆ ಸುಖವೆನಿಸುವ ವಿಷಯಗಳನ್ನು ನಾನೇನು ಮೂದಲಿಸುವುದಿಲ್ಲ, ನಿಂದಿಸುವುದಿಲ್ಲ. ಜನರೆಲ್ಲರಿಗೂ ಅವು ಬೇಕಾದುವೆಂಬುದನ್ನು ನಾನು ಬಲ್ಲೆ. ಆದರೆ ಎಲ್ಲವೂ ಇದ್ದು ಹೋಗುವಂಥವೇ ಎಂಬುದನ್ನು ತಿಳಿದು, ನನ್ನ ಮನಸ್ಸು ಅವುಗಳತ್ತ ಒಲಿಯುವುದಿಲ್ಲ, ಅಷ್ಟೆ."

'ಜರಾ ಮೃತ್ಯುಶ್ಚ ವ್ಯಾಧಿಶ್ಚ ಯದಿ ನ ಸ್ಯಾದಿದಂ ತ್ರಯಂ
ಮಮಾಪಿ ಹಿ ಮನೋಜ್ಞೇಷು ವಿಷಯೇಷು ರತಿರ್ಭವೇತ್'

"ಮುಪ್ಪು, ಸಾವು, ಬೇನೆ ಇವು ಮೂರು ಇರದಿದ್ದರೆ, ನನಗೂ ವಿಷಯ ಸುಖಗಳಲ್ಲಿಯೇ ಆಸಕ್ತಿಯಿರುತ್ತಿದ್ದಿತು."

ಅವನ ರಚನೆಯ ಸೊಗಸನ್ನು ಓದಿಯೇ ತಿಳಿಯಬೇಕು. ಈಗ ನಮಗೆ ದೊರೆತಿರುವ ೧೦೬೩ ಪದ್ಯಗಳಲ್ಲಿ ೪೫೫ ಉಪಜಾತಿ ವೃತ್ತದಲ್ಲಿವೆ, ೩೮೪ ಶ್ಲೋಕಛಂದಸ್ಸು; ಅಲ್ಲಲ್ಲಿ ವಂಶಸ್ಥ, ಶಿಖರಿಣೀ ವೃತ್ತಗಳೂ ಬಳಕೆಗೆ ಬಂದಿವೆ. ಏಳನೆಯ ಸರ್ಗದ ಕಡೆಯ ಪದ್ಯ ಮಂದಾಕ್ರಾಂತಾವೃತ್ತದ ಹಳೆಯದೊಂದು ರೂಪದಲ್ಲಿ ಬಂದಿರುವುದು ಸ್ವಾರಸ್ಯವಾಗಿದೆ. ಬುದ್ಧಚರಿತೆಯನ್ನು ನೋಡಿದಾಗ ಕವಿಗೆ ಸಾಂಖ್ಯ, ಯೋಗ ಮೊದಲಾದ ದರ್ಶನಗಳಲ್ಲೂ, ಕಾಮಶಾಸ್ತ್ರ, ರಾಜನೀತಿ, ದಂಡನೀತಿ, ವ್ಯಾಕರಣ, ಛಂದಃಶಾಸ್ತ್ರ ಮೊದಲಾದ ಶಾಸ್ತ್ರಭಾಗಗಳಲ್ಲೂ ವಿಶೇಷ ಪರಿಶ್ರಮವಿದ್ದುದು, ರಾಮಾಯಣ, ಮಹಾಭಾರತಗಳ ಪರಿಚಯವಿದ್ದುದು ತಿಳಿದುಬರುತ್ತದೆ.

ಈ ಕಾವ್ಯದಲ್ಲಿ ಬೌದ್ಧದರ್ಶನದ, ಬೌದ್ಧಸಾಧನೆಯ, ಸಂಗ್ರಹವಾದ ನಿರೂಪಣೆಯು ಕಾಣಸಿಗುತ್ತದೆ. ಇದೇ ಕಾವ್ಯದ ಮುಖ್ಯವಸ್ತು, ಮುಖ್ಯೋದ್ದೇಶ. ಆದರೆ ಕವಿಯು ಬಳಸಿಕೊಂಡಿರುವ ಕಾವ್ಯ ಪದ್ಧತಿಯಲ್ಲಿ

ಸ್ವಾರಸ್ಯವಿದೆ, ರಸವಿದೆ. ಇದೊಂದು ಕಥೆಯೇ ಅಲ್ಲ, ಒಂದು ಪ್ರಸಂಗದ ನಿರೂಪಣೆ ಅಷ್ಟೆ. ಅಲ್ಲಿರುವ ರಸಗಳು ಎರಡೇ - ಶೃಂಗಾರ ಮತ್ತು ಶಾಂತ. ಶಾಂತರಸ ಪ್ರಧಾನವಾದುದು; ಶೃಂಗಾರ ಗೌಣ. ಸಾಮಾನ್ಯ ಓದುಗರಿಗೆ ಇದು ರುಚಿಸಲಾರದೆಂಬುದು ದಿಟವೇ. ಕಾವ್ಯದ ಉತ್ತರಭಾಗವಂತೂ ತತ್ತ್ವೋಪದೇಶಕ್ಕೇ ಮೀಸಲಾಗಿದೆ. ಆದರೆ ಶಾಂತರಸದ ರುಚಿಯನ್ನು ಕಾಣಬೇಕೆನ್ನುವವರನ್ನು ಈ ಕಾವ್ಯವು ತಣಿಸುತ್ತದೆ. ಕಾವ್ಯಶೈಲಿಯ ಸ್ವಾರಸ್ಯವೂ ಸಹೃದಯರು ಮೆಚ್ಚಬಹುದಾದದ್ದು.

ಚಿತ್ರ 4

(೫) ಕಾವ್ಯದ ಕಥೆ

ಕಪಿಲವಸ್ತುವಿನ ದೊರೆಮಗ ಸಿದ್ಧಾರ್ಥ ಜಗತ್ತಿನ ದುಃಖಕ್ಕೆ ಮರುಗಿ ಜುಗುಪ್ಸೆಯಿಂದ ಮನೆ ಬಿಟ್ಟು, ರಾಜ್ಯ ಬಿಟ್ಟು, ಅತಿ ನಿಷ್ಠುರ ತಪಶ್ಚರ್ಯೆಗಳನ್ನು ಮಾಡಿ, ಕಡೆಗೆ ಬೋಧಿವೃಕ್ಷದ ಬುಡದಲ್ಲಿ 'ಸಿದ್ಧಿ, ಇಲ್ಲ ಸಾವು' ಎಂದು ನಿಶ್ಚಯಿಸಿ ಕುಳಿತು 'ಸಂಬೋಧಿ'ಯನ್ನು ಪಡೆದುಕೊಂಡು, ಎಲ್ಲ ಜೀವಗಳ ಮೇಲಿನ ಪ್ರೀತಿಯಿಂದ ತನ್ನ ತತ್ತ್ವವನ್ನು ಸಾರಲು ಪರಿವ್ರಾಜಕನಾಗಿ, ಮಧ್ಯೆ ತನ್ನ ತೌರೂರಿಗೂ ಅವನ ವಾಸದ ಸೌಭಾಗ್ಯ ಒದಗಿತ್ತು.

ನಂದನು ಸಿದ್ಧಾರ್ಥನ ಮಲತಮ್ಮ. ಸಿದ್ಧಾರ್ಥನು ಹೀಗೆ ಭಿಕ್ಷುವಾಗಿ, ಪರಿವ್ರಾಜಕನಾಗಿ ತಿರುಗುವಲ್ಲಿ, ನಂದನು ಜಗತ್ತಿನ ದಾರಿಯಲ್ಲೇ ಮುಂಬರಿದು ಬಂದಿದ್ದ. ಜೀವನದ ಎಲ್ಲ ಸುಖಸಂಪತ್ತೂ ಅವನ ಪಾಲಿಗೆ ಬಂದಿತ್ತು. ಅವನ ಪ್ರೇಯಸಿ ಸುಂದರಿ, ನಿಜವಾಗಿ ಸುಂದರಿ. ಲಾವಣ್ಯದಲ್ಲಿ, ಗುಣದಲ್ಲಿ ಅವಳಿಗೆ ಸಾಟಿ ಯಾರೂ ಇರಲಿಲ್ಲ. ಅವಳಿಗೆ ಸುಂದರಿ, ಮಾನಿನಿ, ಭಾಮಿನಿ ಎಂಬ ಮೂರೂ ಹೆಸರುಗಳು ಯಥಾರ್ಥವಾಗಿದ್ದುವು.

ನಂದನು ಅವಳ ರೂಪಕ್ಕೆ ಮಾತ್ರ ಮನಸೋತಿರಲಿಲ್ಲ; ಅವರಿಬ್ಬರೂ 'ಭಾವಾನುರಕ್ತ'ರು. ಅವಳು ಚಕ್ರವಾಕಿ, ಇವನು ಚಕ್ರವಾಕ; ಅವಳು ಪದ್ಮಿನಿ, ಇವನು ದಿವಾಕರ. ಮನುಷ್ಯಲೋಕದಲ್ಲಿ ನಂದನಿಗೆ ಸುಂದರಿ ಒಬ್ಬಳೇ ಸ್ತ್ರೀ, ಸುಂದರಿಗೆ ನಂದ ಒಬ್ಬನೇ ಪುರುಷ. ಅವರಲ್ಲಿಯ ಅನ್ಯೋನ್ಯವು ರಾತ್ರಿ ಚಂದ್ರರಲ್ಲಿದ್ದಂತೆ.

ತಾಂ ಸುಂದರೀಂ ಚೇನ್ನ ಲಭೇತ ನಂದಃ
ಸಾ ವಾ ನಿಷೇವೇತ ನ ತಂ ನತಭ್ರೂಃ
ದ್ವಂದ್ವಂ ಧ್ರುವಂ ತದ್ವಿಕಲಂ ನ ಶೋಭೇ
ತಾವನ್ಯೋನ್ಯಹೀನಾವಿನ ರಾತ್ರಿಚಂದ್ರೌ

ತಮ್ಮ ಭೋಗದಲ್ಲಿ ಮಾನವನ ಮಿತಿಯನ್ನು ಅವರು ಮೀರಿದ್ದರು, ದೇವತ್ವವನ್ನು ಇನ್ನೂ ಗಳಿಸಿರಲಿಲ್ಲ. ಅವರದೇ ಒಂದು ಸೃಷ್ಟಿ. ನಂದ ತನ್ನ ಸೌಭಾಗ್ಯದಲ್ಲಿ ಕುಬೇರನನ್ನಾಗಲೀ, ಇಂದ್ರನನ್ನಾಗಲೀ ಗಣನೆಗೆ ತರುವಂತಿರಲಿಲ್ಲ. ಅವರಿಬ್ಬರ ಕೇಳಿ ನಿತ್ಯೋತ್ಸವ; ಪ್ರಾಸಾದವೇ ಸದಾ ಆವಾಸ; ಪ್ರಣಯವು ಒಂದೇ ಕಾರ್ಯ.

ಅಂದು ಮಧ್ಯಾಹ್ನ. ಶ್ರಮಣನಾದ ತಥಾಗತನು ಭಿಕ್ಷೆಗಾಗಿ ಮನೆಯಿಂದ ಮನೆಗೆ ಸಾಗುತ್ತಿದ್ದ. ಯಾರ ಮನೆಯಂತೆಯೇ ನಂದನ, ತನ್ನ ಪೂರ್ವದ ಮಲತಮ್ಮನ, ಮನೆಗೂ ಬಂದ. ಎಂದಿನಂತೆ ಕೆಳನೆಟ್ಟ ದೃಷ್ಟಿ, ಮೌನ, ಪ್ರಣಯದ ಸುಳಿವೇ ಇಲ್ಲದ ಜೀವ. ತುಸುಹೊತ್ತು ಕಳೆದ ಬಳಿಕ ಭಗವಂತನು ಮನೆಯಿಂದ ಹೊರಸಾರಹತ್ತಿದ್ದ; ಮನೆಯಲ್ಲಿ ಯಾರೂ ಇದ್ದಂತೆ ತೋರಲಿಲ್ಲ. ಹೊರಹೊರಡುತ್ತಿರುವ ತಥಾಗತನನ್ನು ಅಕಸ್ಮಾತ್ ಊಳಿಗದ ಹೆಂಗಸೊಬ್ಬಳು ಕಂಡು, ದಡದಡನೆ ಉಪ್ಪರಿಗೆಯನ್ನು ಹತ್ತಿ ಪ್ರಣಯದಲ್ಲಿ ತನ್ಮಯನಾದ ನಂದನಿಗೆ ಆದ ಪ್ರಮಾದವನ್ನು ಅರಿಕೆ ಮಾಡಿದಳು -

> 'ಅನುಗ್ರಹಾಯಾಸ್ಯ ಜನಸ್ಯ ಶಂಕೇ ಗುರುರ್ಗೃಹಂ ನೋ
> ಭಗವಾನ್ ಪ್ರವಿಷ್ಟಃ
> ಭಿಕ್ಷಾಮಲಬ್ಧ್ವಾ ಗಿರಮಾಸನಂ ವಾ ಶೂನ್ಯಾದರಣ್ಯಾದಿವ
> ಯಾತಿ ಭೂಯಃ'

ತಥಾಗತನಾದ ಸಮ್ಯಕ್ಸಂಬುದ್ಧ ಮನೆಬಾಗಿಲಿಗೆ ಬರುವುದೇ ದೊಡ್ಡ ಅನುಗ್ರಹ; ಅಂಥದರಲ್ಲಿ ಭಿಕ್ಷೆಯಿಡದೆ, ಮಾತನಾಡಿಸದೆ, ಆಸನ ತೋರದೆ ಬೆಂಗಾಡಿಂದ ಹೊರಬಂದವನಂತೆ ಕಳುಹಿಸುವುದು ಎಂಥ ಪ್ರಮಾದ! ನಂದನು ಕಕ್ಕಾಬಿಕ್ಕಿಯಾದ; ಮುಗಿಲು ಕಳಚಿ ಬಿದ್ದಂತಾಯಿತು; ಜೀವ ಬತ್ತಿದಂತಾಯಿತು.

ಚೇತರಿಸಿಕೊಂಡು ನಂದನು ಬುದ್ಧನನ್ನು ಹಿಡಿದು, ಕಾಲಿಗೆ ಬಿದ್ದು ಕ್ಷಮೆ ಬೇಡುವುದೆಂದು ನಿರ್ಧರಿಸಿ, ಹೊರಡಲು ಸುಂದರಿಯ ಅನುಜ್ಞೆಯನ್ನು

ಕೇಳಿದ. ಸುಂದರಿ ನಡುಗಿದಳು - ಭಗ್ನಪ್ರಣಯ! ಆದರೆ ಗುರುದರ್ಶನಕ್ಕೆಂದು ಹೊರಡುವವನನ್ನು ತಡೆಯುವುದು ಧರ್ಮಪೀಡೆ; ಸರ್ವಥಾ ಸತ್ಸಂಪ್ರದಾಯ ಅಲ್ಲ. ಮೇಲುಸಿರು ಬಿಡುತ್ತ "ಆಗಲಿ, ಆರ್ಯಪುತ್ರ, ಆದರೆ ತ್ವರೆಯಿಂದ ಹಿಂದಿರುಗಬೇಕು - ನನ್ನ ಕುಚಗಳ ಮೇಲಿನ ವಿಶೇಷಕ (ಚಂದನ ಲೇಪನ) ಒಣಗುವ ಮುನ್ನ ಬರಬೇಕು, ಖಂಡಿತ" ಎಂದು ಆಗ್ರಹಪೂರ್ವಕ ನಿರ್ಬಂಧ ಮಾಡಿದಳು. ಹೊರಡುವ ಮುನ್ನ ಒಂದು ಗಾಢಾಲಿಂಗನ; ನಂದನ ಆತುರವಾದರೂ ಅವಳಿಗೆಲ್ಲಿ? "ಹಾಗೆಯೇ ಆಗಲಿ; ಬಿಡು, ಚಂಡಿ! ಗುರುವು ಬಹುದೂರ ಹೋಗಿಯಾರು" ನಂದನೆಂದ. ಅವಳ ಭುಜಗಳಿಂದೇನೋ ಮುಕ್ತಿ ದೊರೆಯಿತು; ಆದರೆ ಮನಸ್ಸಿನಿಂದ?

ಮುಕ್ತೋ ಭುಜಾಭ್ಯಾಂ ನ ತು ಮಾನಸೇನ

ಸತ್ಕಾರಯೋಗ್ಯವಾದ ವಸ್ತ್ರಗಳನ್ನುಟ್ಟು, ನಂದನು ಹೊರಹೊರಟನು - ಭ್ರಾಂತವಾದ ಜಿಂಕೆಯನ್ನು ಭ್ರಾಂತಮುಖದಿಂದ ಹೆಣ್ಣುಜಿಂಕೆ ನೋಡುವಂತೆ 'ಪ್ರಧ್ಯಾನಶೂನ್ಯಸ್ಥಿತ ನಿಶ್ಚಲಾಕ್ಷಿ'ಯಾದ ಸುಂದರಿಯ ನೋಟ ಅವನ ಗತಿಯ ಮೇಲೆ ನೆಟ್ಟು, ಎಲ್ಲಿಯ ತೃಪ್ತಿ? ಒಂದು ಬೊಗಸೆ ನೀರು ಕುಡಿದರೆ ಬಾಯಾರಿಕೆ ಇಂಗೀತೇ? ಮನಸ್ಸಿಲ್ಲದ ಮನಸ್ಸು ನಂದನದು; ಭಾರ್ಯಾನುರಾಗ ಒಂದು ಕಡೆ ಎಳೆದರೆ, ಗುರುವಿನಲ್ಲಿಯ ಗೌರವ ಮತ್ತೊಂದು ಕಡೆ ಎಳೆಯುತ್ತಿದೆ; ಹೋಗಲೂ ಆರ, ಇರಲೂ ಆರ.

ತಂ ಗೌರವಂ ಬುದ್ಧಗತಂ ಚಕರ್ಷ
ಭಾರ್ಯಾನುರಾಗಃ ಪುನರಾಚಕರ್ಷ
ಸೋಽನಿಶ್ಚಯಾನ್ನಾಪಿ ಯಯೌ ನ ತಸ್ಥೌ
ತರಸ್ತರಂಗೇಷ್ಟಿವ ರಾಜಹಂಸಃ

ಬುದ್ಧನು ದೂರ ಸರಿದಾನು ಎಂಬ ಉತ್ಕಂಠೆಯಿಂದ ಉಪ್ಪರಿಗೆಯಿಂದೇನೋ ಕೆಳಗಿಳಿದ; ಆದರೆ ತನ್ನ ಪ್ರೇಯಸಿಯ ನೂಪುರದ ಶಬ್ದ ಕೇಳಿಸಿದಾಗ ಹೃದಯ ಹಿಡಿದು ನಿಂತ. ಒಂದೆಡೆ ಕಾಮ ಹಿಡಿದು ನಿಲ್ಲಿಸುತ್ತಿದೆ,

ಮತ್ತೊಂದೆಡೆ ಧರ್ಮ ಹಿಡಿದು ಎಳೆಯುತ್ತಿದೆ. ಕಡೆಗೆ ಪ್ರಿಯೆಯ ಆರ್ದ್ರವಿಶೇಷಕದ ಚಿಂತೆಯಲ್ಲೇ ಬುದ್ಧನೆಡೆಗೆ ನಡೆದ.

ಹೊತ್ತು ನೆತ್ತಿ ಮೀರಿ ಹೋಗಿದೆ. ಬುದ್ಧನು ಬೀದಿಯಲ್ಲಿ ನಡೆದು ಹೋಗುತ್ತಿದ್ದಾನೆ; ಭಕ್ತಿಪರವಶರಾದ ಜನಗಳು ತಂಡತಂಡವಾಗಿ ಪ್ರಣಾಮ ಮಾಡುತ್ತಿದ್ದಾರೆ. ನಂದನು ತನ್ನ ಬಾಗಿಲಿಗೆ ಇವನು ಬಂದಾಗ, ತಾನು ಪ್ರಣಯದ ಮದದಲ್ಲಿದ್ದು ಅನಾದರಣೆ ಮಾಡಿದ ಅಚಾತುರ್ಯ, ಪ್ರಮಾದ; ಇಲ್ಲಿ ಜನಗಳು ತಾವಾಗಿ ಬಂದು ತಥಾಗತನಿಗೆ ತಲೆಬಾಗುತ್ತಿರುವ ದೃಶ್ಯ. ನಂದನಿಗೆ ತಾನು ಮಾಡಿದ ಅಪರಾಧದ ಭಾರ ದುರ್ಭರವಾಯಿತು. ಕಾಮದ ಮಡಿಲಲ್ಲಿದ್ದ ತಾನು ಮಾಡಿದುದು ಎಂಥ ಪ್ರಮಾದ? ಎಂಥ ಪಾಪಿ ತಾನು?

ಕಡೆಗೆ ಹೇಗೋ ಮಾರ್ಗವಿದನಾದ, ನಾಂದೀ ವಿಮುಕ್ತನಾದ ಸುಗತನ ಮುಂದೆ ನಂದನು ಬಂದು 'ಅಧೋನಿಬದ್ಧಾಂಜಲಿರೂರ್ಧ್ವನೇತ್ರ'ನಾಗಿ ಗದ್ಗದ ಕಂಠದಿಂದ "ಪ್ರಾಸಾದದಲ್ಲಿದ್ದೆ, ಭಗವನ್, ತಾವು ಅನುಗ್ರಹಿಸಿ ಮನೆಗೆ ಬಂದಾಗ ಸತ್ಕರಿಸಲಿಲ್ಲ; ಕ್ಷಮೆಯಿರಲಿ. ತಮ್ಮ ಭೈಕ್ಷಕಾಲ ನನ್ನ ಮನೆಯಲ್ಲೇ ಆಗಬಾರದೇಕೆ?" ಎಂದು ಬೇಡಿಕೊಂಡ. ಸುಗತನ ಮುಖದಲ್ಲಿ ಸ್ನೇಹಾಭಿಮಾನದ ಮುದ್ರೆ ಮೂಡಿತು; ಆದರೆ ಭಿಕ್ಷೆಯ ವೇಳೆ ಮೀರಿ, ದಿನದ ಗ್ರಾಸ ಲಬ್ಧವಾಗಿ, ಈಗ ಭಿಕ್ಷದ ಅಗತ್ಯ ಇಲ್ಲೆಂದು ಸುಗತನು ಸನ್ನೆ ಮಾಡಿದನು. ಆದರೂ ತನ್ನ ಭಿಕ್ಷಾಪಾತ್ರೆಯನ್ನು ಬಿಲ್ಲು-ಬಾಣ ಹಿಡಿಯಲು ಯೋಗ್ಯವಾದ ನಂದನ ಕೈಗಳಲ್ಲಿ ಕೊಟ್ಟನು.

ನಂದನು ತನ್ನ ಮನೆಗೆ ಹಿಂದಿರುಗುವುದರಲ್ಲಿದ್ದ; ಭಾರ್ಯಾನುರಾಗವು ಅವನನ್ನು ಎಳೆಯುತ್ತಿದ್ದಿತು; ವಿಶೇಷಕ ಎಲ್ಲಿ ಒಣಗುವುದೋ ಎಂಬ ಚಿಂತೆಯು ಅವನನ್ನು ಬಾಧಿಸುತ್ತಿತ್ತು. ಈಗ ತಥಾಗತನ 'ಆಕರ್ಷಣೆ'ಯಾದರೂ ಶಕ್ತಿಯುತವಾಗಿತ್ತು. ದಾರಿಯ ಕಡೆ ಹಾದ ದೃಷ್ಟಿ ಮೆಲ್ಲಗೆ, ದುಃಖದಿಂದ, ಗುರುವಿನ ಬಳಿ ಬಂದಿತು.



ಚಿತ್ರ 5

ನಂದನ ದೈನ್ಯ ಸ್ಫುಟವಾಗಿ ಕಾಣುತ್ತಿತ್ತು; 'ಭಾರ್ಯಾಮುಖವೀಕ್ಷಣಲೋಲನೇತ್ರ', 'ಭಗ್ನಪ್ರಮದಾವಿಹಾರ' ಅವನು. ಮಹಾಕಾರುಣಿಕನಾದ ತಥಾಗತನಿಗೆ ನಂದನ ವಿಷಯದಲ್ಲಿ ಮರುಕ ಹುಟ್ಟಿ ಅವನೆಂದ - "ಸೌಮ್ಯ, ಗಾಳಿ ಬೀಸುತ್ತಿರುವಲ್ಲಿ ಹವ್ಯದಿಂದ ಅಗ್ನಿಗೆ ತೃಪ್ತಿ ಉಂಟೇ? ಅಂತೆಯೇ ಜಗತ್ತಿನ ಕಾಮಗಳಿಂದ ತೃಪ್ತಿಯಿಲ್ಲ, ನಂದ. ಶಮೆಯ ಕಡೆ ಮನಸ್ಸು ಕೊಡು. ಇಂದ್ರಿಯಗಳಿಗೆ ಸೋತರೆ ಅದರಿಂದ ಅನರ್ಥ ವಿನಾ ಬೇರಿಲ್ಲ; ನಿತ್ಯವಾದ, ಮಂಗಲವಾದ, ಶಾಂತಿಸುಖವನ್ನು ಸಾಧಿಸುವ ಧೈರ್ಯಮಾಡು. ಎಲ್ಲದರಲ್ಲೂ ಸಾವು ಅಡುಗಿದೆ, ನಂದ; ಹೇಗೂ ಸಾವು ಬಂದೇ ಬರುತ್ತದೆ. ತತ್ತ್ವ ತಿಳಿದರೆ ಸಾವು ಬಂದಾಗ ಧೈರ್ಯ ತಾಳಬಹುದು. ಪ್ರಿಯವಿಪ್ರಯೋಗ ಅವಶ್ಯವಾಗಿ ಆಗಬೇಕಾದದ್ದೇ. ಶೋಕವೆಂಬುದನ್ನು ಸಹಿಸಲೇಬೇಕು. ಕೈಯಲ್ಲಿ ಔಷಧವಿದ್ದಾಗ ಹಾವು ಹೇಗೆ ಕಚ್ಚಲಂಜುವುದೋ, ಹಾಗೆಯೇ ಲೋಕದ ಮೋಹಗಳನ್ನು ಜಯಿಸಿರುವವನ ಮುಂದೆ ಶೋಕಭುಜಂಗ ಅಂಜುತ್ತದೆ. ವ್ಯಾಧಿಗಿಂತ ಹೆಚ್ಚಿನ ಅನರ್ಥ ಯಾವುದು, ನಂದ? ಭೂಮಿಯ ಮೇಲೆ ಮೃತ್ಯುವಿಗಿಂತ ಹೆಚ್ಚಿನ ಭಯ ಉಂಟೇ? ಸ್ನೇಹವನ್ನು ಮೀರಿದ ಪಾಶ, ಆಶೆಗಿಂತ ಮಿಗಿಲಾದ ನದಿ, ರಾಗಕ್ಕಿಂತ ಅನರ್ಥಕಾರಿಯಾದ ಅಗ್ನಿ ಇಲ್ಲ. ಧನಗಳಲ್ಲೆಲ್ಲ ಶ್ರದ್ಧೆಯ ಧನವೇ ಹೆಚ್ಚಿನದು; ರಸಗಳಲ್ಲೆಲ್ಲ ಪ್ರಜ್ಞಾರಸದಂಥ ತೃಪ್ತಿಕರವಾದದ್ದು ಇನ್ನೊಂದಿಲ್ಲ; ಸುಖಗಳಲ್ಲೆಲ್ಲ ಆಧ್ಯಾತ್ಮ ಸುಖ ಮಿಗಿಲಾದದ್ದು; ರತಿಗಳಲ್ಲೆಲ್ಲ ವಿದ್ಯಾರತಿ ಕಷ್ಟಸಾಧ್ಯವಾದುದು."

ಬುದ್ಧನ ಅನುಕಂಪವಾದರೋ ಎಲ್ಲ ಜೀವಿಗಳ ಮೇಲೂ ಪಸರಿಸಿದ್ದು; ಅವನು 'ಮೈತ್ರಮನಾಮಹರ್ಷಿ'. ತನ್ನ ಭಿಕ್ಷಾಪಾತ್ರೆಯನ್ನು ನಂದನ ಕೈಲಿಟ್ಟು 'ಶಮೆಗಾಗಿ ಪ್ರವ್ರಜಿಸು, ನಂದ' ಎಂದಾಗ, ನಂದನ ಮರುತ್ತರ ಏನು?

ನಂದನ ಹೃದಯ ಅಳುತ್ತಿತ್ತು; ಹೆಣ್ಣಿನ ಮೇಲಿನ ಮೋಹ ಇನ್ನೂ ಉರಿಯುತ್ತಿತ್ತು. ಮೆಲ್ಲನೆ ನಂದನೆಂದ, "ಪ್ರವ್ರಜಿಸುವುದಿಲ್ಲ, ಗುರುವೆ."

ಬುದ್ಧನು ಮತ್ತೆ, "ನಾನು ತೋರಿಸುವ ದಾರಿ ಪ್ರಿಯವಾದುದಲ್ಲ, ನಂದ; ಆದರೆ ಮಂಗಲವಾದದ್ದು, ಶುಚಿಯಾದದ್ದು. ಮಗುವಿನ ಕೈಯಿಂದ ಕಲ್ಲನ್ನು ಕಿತ್ತು ತಾಯಿಯು ದೂರ ಎಸೆಯುವಂತೆ, ನಿನ್ನ ಹೃದಯದಿಂದ ಮೋಹದ ಬಾಣವನ್ನು ಕಿತ್ತೊಗೆಯಲು ಯತ್ನಿಸಿದೆ, ನಂದ; ಈ ಕೃತ್ಯ ಕಠೋರವಾದುದು, ನಿಜ. ಆದರೆ ಅದರಿಂದ ಹಿತವಲ್ಲದೆ ಬೇರೇನು? ಕೊಡುವ ಔಷಧಿಯು ರುಚಿಯಾಗಿಲ್ಲದಿದ್ದರೂ ಅದನ್ನು ಕುಡಿಸುವ ನಿರ್ಬಂಧ ಏಕೆ? ನಾಲಗೆಗೆ ಪ್ರತಿಕೂಲ ಎಂದು ಕಂಡರೂ, ಜೀವಕ್ಕೆ ಹಿತವೆಂದು ತಾನೆ? ಮನೆ ಸುತ್ತಲೂ ಬೆಂಕಿ ಹತ್ತಿ ಉರಿಯುತ್ತಿದ್ದಾಗ, ಮನೆಯ ಒಳಗೆ ನಿದ್ರೆ ಮಾಡುತ್ತಿರುವವನ ಸುಖ ಏನು, ನಂದ? ಶ್ರೇಯಸ್ಸಿಗೆ ಸಾಧನ ಮಾಡಬೇಕು," ಎಂದು ಮತ್ತೆ ಹೇಳಿದನು. ನಂದನು ತಲೆ ಬಾಗಿದ. 'ಕ್ಷಣ ಸಂನಿಪಾತ' ಎಂದರೆ ಭಗವಂತನಾದ ತಥಾಗತನು ಜೀವಂತನಾಗಿದ್ದಾಗಲೇ ತಾನೂ ಜೀವಂತನಾಗಿರುವುದು. ಅದೇ ಒಂದು ಮಹಾಭಾಗ್ಯ. ನಂದನು ಈ ಭಾಗ್ಯಕ್ಕೆ ಪ್ರಣಯಿಯಾದ. ಸುಂದರಿಯ ಚಕ್ರವಾಕನಾದ ನಂದನು ಸನ್ಯಾಸಿಯಾದ.

ಆಗಿನ ಸಂನ್ಯಾಸದೀಕ್ಷೆಯು ಗುರುವು 'ಬಾ' ಎನ್ನುತ್ತಾನೆ, ಬಂದೆನೆಂದು ಶಿಷ್ಯನು ಹೇಳಿದರೆ ಅಷ್ಟೇ; ಇನ್ನು ಯಾವ ವಿಧಿಯೂ ಇರಲಿಲ್ಲ.

ಇತ್ತ ಸುಂದರಿಯು ನಂದ ಬರುವುದನ್ನೇ ಇದಿರುನೋಡುತ್ತಾ ಗವಾಕ್ಷ ಏರಿ, ಬಾಗಿಲ ಕಡೆ ನೆಟ್ಟ ಕಣ್ಣಾಗಿ, ಶೋಕದಿಂದ ಬೆವರುತ್ತಾ, ನಿಶ್ವಾಸದಿಂದ ನಿಷ್ಪ್ರೀತವಿಶೇಷಕಳಾಗಿ ಕಾಯುತ್ತಿದ್ದಾಳೆ. ಇಷ್ಟು ತಡ ಏಕೆ? ಬೇರೆ ಹೆಣ್ಣಿನ ಮೇಲೆ ಕಣ್ಣು ಬಿತ್ತೇ? ಅವಳಲ್ಲಿ ಕಾಮ, ಕೋಪ ಎರಡೂ ಉರಿಯುತ್ತಿತ್ತು. 'ಅವನು ರತಿಪ್ರಿಯ; ನಾನು ಅವನಿಗೆ ಪ್ರಿಯವರ್ತಿನಿ. ನನ್ನಲ್ಲಿ ವಿರಕ್ತಿ ಏಕೆ' ಎಂದು ಅವಳಿಗೆ ಅರ್ಥವಾಗಲಿಲ್ಲ. ಬೇರೊಬ್ಬ ಪ್ರೇಯಸಿಗೆ ತನ್ನ ಹೃದಯವನ್ನು ಅವನು ಮಾರಿದ್ದಾನೆಂದೇ ಅವಳ ಸ್ತ್ರೀ ಸಹಜವಾದ ಶಂಕೆ; ಅವನು 'ಚಲಸೌಹೃದ'ನೆಂದೇ ಅವಳ ಸಿದ್ಧಾಂತ. ಅಷ್ಟರಲ್ಲಿ, ನಂದ ಪ್ರವಜಿಸಿದನೆಂಬ

ಸುದ್ದಿ ಬಂದು ಮುಟ್ಟಿತು! ಅದನ್ನು ಕೇಳಿ ಸುಂದರಿಯು,

ಸವೇಪಥುಃ ಸಾ ಸಹಸೋತ್ಪಪಾತ, ಪ್ರಗೃಹ್ಯ ಬಾಹೂ
ವಿರುರಾವ ಚೋಚ್ಚೈರ್ಹೃದೀವ ದಿಗ್ಧಾಭಿಹಿತಾ ಕರೇಣುಃ

ಮಾವಿನ ಹಣ್ಣು ಮಾಗಿ, ಭಾರದಿಂದ ಚೂತಯಷ್ಟಿ ಮುರಿದು ಬೀಳುವಂತೆ ಸುಂದರಿಯು ಬಿದ್ದಳು. ಅನ್ಯ ಸ್ತ್ರೀಯಲ್ಲಿ ಅನುರಕ್ತನಾಗಿದ್ದಾನೆಂಬ ಶಂಕೆಯಿಂದ ಮೊದಲು ಕಲುಷಿತಳಾಗಿದ್ದವಳು, ಈಗ ಸಂಸಾರದಿಂದ ವಿಮುಕ್ತನಾಗಿದ್ದಾನೆಂಬ ವಾರ್ತೆಯನ್ನು ಕೇಳಿ ಕಂಗಾಲಾದಳು. ದೂತಿಯು "ನಿನ್ನ ಸ್ವಾಮಿಯಲ್ಲಿ ದೋಷವನ್ನೆಣಿಸಬೇಡ; ಅವನು ಪ್ರಿಯ, ಪ್ರಿಯಾರ್ಹ, ಪ್ರಿಯಕಾರಿ. ನಿನ್ನ ವಿನಾ ಬೇರೆ ಪ್ರಮದೆಯಲ್ಲಿ ಚಕ್ರವಾಕ ತನ್ನ ಚಕ್ರವಾಕಿಯನ್ನು ಬಿಟ್ಟು ಅಲುಗದಂತೆ - ನಿಜವಾಗಿ ಆಸಕ್ತನಾಗಲಾರ; ಆದರೆ 'ಭ್ರಾತ್ರಾ ಕಿಲ ಆರ್ಯೇಣ ತಥಾಗತೇನ ಪ್ರವ್ರಾಜಿತಃ' ಎಂದಾಗ ಆ ಮಾತು ಸಂತಾಪಕ್ಕೆ ಸಹಕಾರಿಯಾಯಿತು. ತನ್ನ ರಮಣನ ಗುಣಗಳನ್ನು ಚಿಂತಿಸಿ ಚಿಂತಿಸಿ, ನಿಟ್ಟುಸಿರು ಬಿಟ್ಟು ಬೆಂದಳು.

ಸಾ ಚಕ್ರವಾಕೀವ ಭೃಶಂ ಚುಕೂಜ ಶ್ಯೇನಾಗ್ರಪಕ್ಷ ಕ್ಷತಚಕ್ರವಾಕಾ;
ವಿಸ್ಪರ್ಧಮಾನೇವ ವಿಮಾನಸಂಸ್ಥೈಃ ಪಾರಾವತೈಃ ಕೂಜನಲೋಲಕಂಠೈಃ
ಶೋಕಾಗ್ನಿನಾನ್ತರ್ಹೃದಿ ದಹ್ಯಮಾನಾ ವಿಭ್ರಾಂತಚಿತ್ತೇವ ತದಾ ಬಭೂವ,
ರುರೋದ ಮಮ್ಲೌ ವಿರುರಾವ ಜಗ್ಲೌ ಬಭ್ರಾಮ ತಸ್ಥೌ ವಿಲಲಾಪ ದಧ್ಯೌ;
ಚಕಾರ ರೋಷಂ ವಿಚಕಾರ ಮೌಲ್ಯಂ ಚಕರ್ತ ವಕ್ತ್ರಂ ವಿಚಕರ್ಷ ವಸ್ತ್ರಂ.

ಹದ್ದು ಎರಗಿ ಬಂದು ಚಕ್ರವಾಕವನ್ನು ಹೊಡೆದುರುಳಿಸಿದಾಗ ಚಕ್ರವಾಕಿಯು ಕಂಗಾಲಾಗದೆ? ಒಡಲೊಳಗೆ ಶೋಕದ ಬೆಂಕಿ, ತಲೆಯೊಳಗೆ ಭ್ರಾಂತವಾದ ಮನಸ್ಸು. ಅತ್ತಳು, ಅರಚಿಕೊಂಡಳು, ಸಿಟ್ಟುಗೊಂಡಳು, ಉಟ್ಟಬಟ್ಟೆಯನ್ನು ಹಿಡಿದೆಳೆದಳು, ಹುಚ್ಚಿಯಂತಾದಳು.

ಆ ಚಾರುದಂಪತಿಯ ರೋದನ ಮುಗಿಲು ಮುಟ್ಟಿತು. ನಾರಿಯರ ವಿವಿಧವಾದ ಸಾಂತ್ವನವು ಕಿಂಚಿತ್ತೂ ಪ್ರಯೋಜನಕ್ಕೆ ಬರಲಿಲ್ಲ. "ರೂಪದಲ್ಲಿ,

ಗುಣದಲ್ಲಿ ನಿನ್ನನ್ನು ಮೀರಿಸಿದ ಯಾವೊಬ್ಬ ಸ್ತ್ರೀಯಾದರೂ ನಂದನ ಹೃದಯವನ್ನು ಕದ್ದರೆ, ನೀನು ಅಳುವುದು ಸಹಜ; ಯಾವ ಮನಸ್ವಿನಿ, ರೂಪವತಿ, ಗುಣಾಢ್ಯಳು ತಾನೇ ಅಳಳು? ಆದರೆ ಕಾಮವನ್ನೇ ಬಿಟ್ಟು ಧರ್ಮದಲ್ಲಿ ಶರಣುಹೊಕ್ಕವನು ನಂದ; ಇದು ಹರ್ಷಕಾಲ, ಸುಂದರಿ; ಅಳುವುದು ಅಯುಕ್ತ," ಎಂದು ಸಖಿಯರು ಹೇಳಿದರು. ಆದರೆ ಜೀವನದ ಸರ್ವಸ್ವವೂ ಕೈಬಿಟ್ಟುಹೋದಾಗ ಎಲ್ಲಿಯ ಸಮಾಧಾನ?

ನಂದನೇನೋ ಶಿರೋಮುಂಡನ ಮಾಡಿಕೊಂಡು ಕಾಷಾಯ ವಸ್ತ್ರವನ್ನುಟ್ಟ; ಆದರೆ ಕಾಷಾಯ ಇನ್ನೂ ಅವನ ಹೃದಯವನ್ನು ಮುಟ್ಟಿರಲಿಲ್ಲ. 'ಅಪೇತೋ ದಮಸಚ್ಚೇನ ನ ಸ ಕಾಸಾವಮರಹತಿ.' ಮನಸ್ಸಿನಲ್ಲಿ ಶಮೆಯಿರದವನಿಗೆ ಕಾಷಾಯವಸ್ತ್ರವೇಕೆ? ನಂದನು ಇನ್ನೂ ಇಂದ್ರಿಯಗಳಲ್ಲಿ ಅಸಂವೃತ; ಶುಭದ ಕಡೆಗೆ ಒಲಿದವನು ದಿಟ; ಆದರೆ ಅವನ ಚಿತ್ತ ಇನ್ನೂ ಅಭಾವಿತ. ನೀರಿನಲ್ಲಿ ಹುಟ್ಟಿ ಬೆಳೆದ ಮೀನನ್ನು ನೆಲದ ಮೇಲೆ ಬಿಟ್ಟರೆ ಅದು ಒದ್ದಾಡುವಂತೆಯೇ ಮಾರನ ಅರಮನೆಯಿಂದ ಹೊರಹಾಯಲು ನಂದನ ಮನಸ್ಸು ಒಲ್ಲದು.

ಸುಂದರಿಯ ಲಾವಣ್ಯ, ಗುಣಾತಿಶಯಗಳನ್ನು ನೆನೆದು ನೆನೆದು ವಿಲಪಿಸಿದನು.

'ಕಾಮಾಗ್ನಿನಾಂತರ್ಹೃದಿ ದಹ್ಯಮಾನೋ ವಿಹಾಯ ಧೈರ್ಯಂ ವಿಲಲಾಪ ತತ್ತತ್'

ಸ್ನೇಹದ ಪಾಶ ಕಡಿಯಲು ದುಸ್ಸಾಧ್ಯ. "ನನ್ನ ಗುರು ಬುದ್ಧನಾದರೂ ನಾನು ಕಾಮಾತ್ಮಕ - 'ಸರ್ವಾಸ್ವವಸ್ಥಾಸು ಲಭೇ ನ ಶಾಂತಿಂ ಪ್ರಿಯಾ-ವಿಯೋಗಾದಿವ ಚಕ್ರವಾಕಃ.' ಹಿಂದಿನ ಎಂಥೆಂಥ ಮಹರ್ಷಿಗಳು, ಮಹಾತ್ಮರು, ಅಗ್ನಿ, ಸೂರ್ಯ, ಕಪಿಂಜಲ, ಪರಾಶರ, ದ್ವೈಪಾಯನ, ಅಂಗಿರಸ, ಕಾಶ್ಯಪ, ಗಾಧಿರಾಜ, ರುರು, ಶಂತನು, ಜನಮೇಜಯಾದಿಗಳು ಕಾಮವನ್ನು ಇದಿರಿಸಲಾರದೆ ಸ್ತ್ರೀಸಂಗ ಮಾಡಲಿಲ್ಲವೆ? ಅವರ ಮುಂದೆ ನಾನೆಲ್ಲಿ? ಬುದ್ಧಿಯಲ್ಲಾಗಲಿ, ಧೈರ್ಯದಲ್ಲಾಗಲಿ ನಾನು ದುರ್ಬಲ; ನಾನು ಪ್ರಿಯೆಯನ್ನು

ಕಾಣದೆ ಬಳಲುವುದು ಏನಾಶ್ಚರ್ಯ? ನಾನು ಕಾಷಾಯ ಧರಿಸಿದ್ದರೂ ನಿಷ್ಕಷಾಯನಾಗಿಲ್ಲ; ಭಿಕ್ಷುವೃತ್ತಿಗೆ ಪಾತ್ರನಾಗಿಲ್ಲ - ಭಿಕ್ಷುವೂ ಅಲ್ಲ. ಗೃಹಸ್ಥನೂ ಅಲ್ಲವಾಗಿದ್ದೇನೆ.

ಯಾಸ್ಯಾಮಿ ತಸ್ಮಾದ್ಗೃಹಮೇವ ಭೂಯಃ ಕಾಮಂ ಕರಿಷ್ಯೆ ವಿಧಿವತ್ಸಕಾಮಂ;
ನ ಹ್ಯಸ್ಯ ಚಿತ್ತಸ್ಯ ಚಲೇಂದ್ರಿಯಸ್ಯ ಲಿಂಗಂ ಕ್ಷಮಂ ಧರ್ಮಪಥಾಚ್ಚ್ಯುತಸ್ಯ.

ಯತಿಧರ್ಮಕ್ಕೆ ಅವಮರ್ಯಾದೆ ಮಾಡುವುದು ಯುಕ್ತವಲ್ಲ; ಸನ್ಯಾಸಕ್ಕೆ ನನ್ನಲ್ಲಿ ಯೋಗ್ಯತೆಯಿಲ್ಲ; ಮತ್ತೆ ಈ ವೇಷ ಬಿಟ್ಟು ಮನೆಗೆ ಹಿಂದಿರುಗಿ ಸುಂದರಿಯ ಭುಜಗಳನ್ನಾಶ್ರಯಿಸುತ್ತೇನೆ," ಎಂದುಕೊಂಡ ನಂದ.

ನಂದನ ಈ ಮನಃಸ್ಥಿತಿ ಅರ್ಹತನಾದ ಬುದ್ಧನಿಗೆ ಅರಿವಾಗದೆ ಇರಲಿಲ್ಲ. ಮೈತ್ರಿಯಿಂದ, ಖಿನ್ನಹೃದಯದ ನಂದನನ್ನು ಕುರಿತೆಂದನು - "ಧೈರ್ಯ ತಂದುಕೋ, ನಂದ; ಶಮೆಯ ಉಪಾಸಕರಿಗೆ ಕಣ್ಣೀರು ಶೋಭಿಸುವುದಿಲ್ಲ. ಮನಸ್ಸಿನ ದಾರಿಗಳು ಬೇರೆ ಬೇರೆ; ಕಾಮಾತುರರ ಮನಸ್ಸಂತೂ ಅತಿ ಗುಹ್ಯ" ಎಂದು ಹೇಳಿ ನಂದನ ಕೈ ಹಿಡಿದು, ಪಕ್ಕದ ಉಪವನಕ್ಕೊಯ್ದ. ಅಲ್ಲಿಯ ಲತಾಗೃಹದಲ್ಲಿ ಬುದ್ಧ-ನಂದ ಇಬ್ಬರೂ ಕೂತರು.

ಪಂಜರಕ್ಕೆ ಒಗ್ಗಿದ ಹಕ್ಕಿಯನ್ನು ಅಯ್ಯೋ ಎಂದ ಪುಣ್ಯಾತ್ಮ ಒಬ್ಬ ಹಾರಿಹೋಗಬಿಟ್ಟರೆ, ಮತ್ತೆ ಅದೇ ಪಂಜರಕ್ಕೆ ಅದು ಬಂದಂತೆ, ಆನೆ ಮರಿ ಆಳವಾದ ಕೆಸರಲ್ಲಿ ಸಿಕ್ಕಿ ಒದ್ದಾಡುತ್ತಿದ್ದಾಗ, ಅದರ ತಾಯಿ ಆನೆ ಅದನ್ನು ಮೇಲೆಳೆದು ತಂದುಬಿಟ್ಟರೆ, ಮತ್ತೆ ಅಲ್ಲಿಗೇ ಅದು ಹೋಗಬಯಸುವಂತೆ, ಮನ್ಮಥಶೋಕಕರ್ಷಿತನಾದ ನಂದನನ್ನು ನೋಡಿ ಹಿತಕಾಂಕ್ಷಿಯಾದ ಶ್ರಮಣನು ಬುದ್ಧಿ ಹೇಳಿದನು.

"ವಿಷಯಗಳಲ್ಲಿ ದೋಷ ಕಾಣುವವನನ್ನು, ಸಮಾಧಾನವಾಗಿರುವವನ್ನು, ಮಂಗಲವಾದ ಕರ್ಮಗಳಲ್ಲಿ ಬುದ್ಧಿಯುಳ್ಳವವನನ್ನು, ಮನಸ್ಸನ್ನು ಬಿಗಿ ಹಿಡಿದಿರುವವನನ್ನು, ಕಾಮವು ಬಾಧಿಸಲಾರದು. ಮೇಯುತ್ತಿರುವ ಹಸುವನ್ನು ಒಮ್ಮೆ ಮೇಲೆಳೆದರೆ ಅದು ಮತ್ತೊಂದೆಡೆ ಮೇಯುತ್ತದೆಯಲ್ಲವೆ? ಹಾಗೆಯೇ

ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಓಡುವ ಸ್ವಭಾವ ಕಾಮದ್ದು. ಇಂದಿನ ಸೌಂದರ್ಯ ಎಂದೂ ಇರುವುದಿಲ್ಲ, ನಂದ; ಅದರ ಪ್ರಕೃತಿ, ಪ್ರಭಾವ ನೋಡಿದರೆ ಹೇಯವಾದದ್ದು. ಕವಚ, ಬಾಣ, ಬಿಲ್ಲು ಎಲ್ಲ ಧರಿಸಿ ರಣರಂಗಕ್ಕೆ ಬಂದು ಅಲ್ಲಿಂದ ಭಯದಿಂದ ಹಿಂದಿರುಗುವುದು ಎಷ್ಟು ನಿಂದ್ಯವೋ, ಸಂನ್ಯಾಸವನ್ನು ಸೇರಿ ಅಲ್ಲಿಂದ ಒಂದು ಹೆಣ್ಣಿಗಾಗಿ ಹಿಂದಿರುಗುವುದು ಅಷ್ಟೇ ನಿಂದ್ಯ."

ಇಷ್ಟು ಹೇಳಿದರೂ ನಂದನ ಮನಸ್ಸು ಪ್ರಿಯೆಯಿಂದ ಹಿಂದಿರುಗಲಿಲ್ಲ; ಉಪಶಮನವಾಗಲಿಲ್ಲ. ತನ್ನ ಬಲ, ರೂಪ, ಯೌವನಗಳಿಂದ ಉನ್ಮತ್ತನಾದ ಅವನಿಗೆ ಶಾಂತಿಯ ಕರೆ ಅಷ್ಟಾಗಿ ಹಿಡಿಸಲಿಲ್ಲ. "ನೀನು ಬಲಿಷ್ಠವೆಂದು ಎಣಿಸಿರುವ ದೇಹ, ರೋಗದ ಆವಾಸಸ್ಥಾನ, ಮುಪ್ಪಿಗೆ ಬಲಿ, ನೀರಿನ ಗುಳ್ಳೆಯಂತೆ ದುರ್ಬಲ. ಚರ್ಮ, ಅಸ್ಥಿ, ಮಾಂಸಗಳಿಂದಾದ ದೇಹ, ಹಸಿವು ಮುಂತಾದವುಗಳಿಂದ ಪೀಡಿತವಾದ ದೇಹ, ಆಹಾರದಿಂದ ನಿಂತಿರುವ ದೇಹ, ಎಂದಿಗೂ ಆರ್ತವಾಗಿರುವ, ಪ್ರತಿಕ್ರಿಯಾರ್ಹವಾದ ಈ ದೇಹವನ್ನು ಬಲಯುಕ್ತವಾದದ್ದೆಂದು ತಿಳಿದೆಯಾ? ಇಂದ್ರಿಯಗಳನ್ನು ಜಯಿಸಿದರೆ ಅದು ಬಲ, ನಂದ. ಮತ್ತೆ ರೂಪವೆಂಬುದು ಶರೀರ, ಸಂಸ್ಕಾರಗುಣದಿಂದಾದದ್ದು. ಯೌವನವಾದರೋ ನದಿಯಂತೆ ಶೀಘ್ರಗಾಮಿ; ಬಲು ಬೇಗ ಇಂಗಿಹೋಗುತ್ತದೆ, ಮತ್ತೆ ಖಂಡಿತ ಬರುವುದಿಲ್ಲ. ಮುಪ್ಪಿನಿಂದ ಜರ್ಜರಿತವಾದ ಮುಖವನ್ನು ನೋಡಿದರೆ ನಿನಗೆ ಯೌವನದ ಸ್ವರೂಪವೇನೆಂದು ಗೊತ್ತಾಗುತ್ತದೆ.

> ಯಥೇಕ್ಷುರತ್ಯಂತರಸಪ್ರಪೀಡಿತೋ ಭುವಿಪ್ರವಿದ್ಧೋ ದಹನಾಯ ಶುಷ್ಯತೇ;
> ತಥಾ ಜರಾಯಂತ್ರನಿಪೀಡಿತಾ ತನುರ್ನಿಪೀತಸಾರಾ ಮರಣಾಯ ತಿಷ್ಠತಿ.

ಕಬ್ಬಿನಲ್ಲಿ ರಸ ತುಂಬಿದ್ದರೂ, ಬೆಂಕಿಗೆ ಅದನ್ನು ಒಡ್ಡಿದರೆ ರಸವೆಲ್ಲ ಇಂಗಿ ಕಬ್ಬು ಕಟ್ಟಿಗೆಯಾಗಿ ಉರಿಯುವುದಿಲ್ಲವೆ? ಹಾಗೆಯೇ ಈ ದೇಹವೂ ಎಂದು ತಿಳಿ.

ಚಿತ್ರ 6

ನಾನು ಬಲವಂತ, ರೂಪವಂತ, ಯುವಾ ಎಂಬ ಅಭಿಮಾನ ಸಲ್ಲದು, ನಂದ. ಕಾಮಸುಖಗಳಲ್ಲಿ ಮನಸ್ಸು ಹೋದಂತೆಲ್ಲ, ವಿಷಯಗಳಲ್ಲಿ ಆಸೆ ಹೆಚ್ಚುತ್ತದೆ. ಶರೀರ ಬಹುದುಃಖಭಾಜನ; ವಿಷಯಾಭಿಕಾಂಕ್ಷೆ ಅನರ್ಥಕ್ಕೆ ಮೂಲ. ಅದಕ್ಕಿಂತ ದೊಡ್ಡ ಶತ್ರು ಇಲ್ಲ."

ನಂದನಿಗೆ ಸಮಾಧಾನವಾಗಲಿಲ್ಲ; ಸುಂದರಿಯನ್ನು ನೋಡುವಾಸೆ, ಮನೆಯನ್ನು ಮತ್ತೆ ಸೇರುವಾಸೆ ಅವನನ್ನು ಬಿಡಲಿಲ್ಲ. ಸುಂದರಿಯೆಂಬ ಕಾಂತಾರದಲ್ಲಿ ಭ್ರಮಿಸುತ್ತಿರುವ ನಂದನ ಕೈ ಹಿಡಿದು ಅರ್ಹತನಾದ ತಥಾಗತನು ಒಂದು ಆಶ್ಚರ್ಯ ದರ್ಶನ ಮಾಡಿಸಿದ. ಗಾಳಿಯಂತೆ ಇಬ್ಬರೂ ಮೇಲೆ ಹಾರಿ ಸ್ವರ್ಗದಲ್ಲಿ ಬಂದಿಳಿದರು. ಅದರ ವೈಭವ ಹೇಳತೀರದು. ಶುಭ್ರವಾದ ನೀರಿನ ತಡಾಗಗಳು, ಮನೋಹರವಾದ ಚಕ್ರವಾಕದಂಪತಿಗಳು, ಉನ್ನತ ಗಿರಿಗಳು, ವಿಶಾಲ ವೃಕ್ಷಗಳು, ಕಿಂನರಿಯರ ಹಿಂಡು, ಸುಂದರ ಹರಿಣಿಗಳು, ಚೇಷ್ಟೆಯ ಕಪಿಗಳು ಮುಂತಾದವುಗಳನ್ನು ನೋಡಿ ನಂದನ ವಿಸ್ಮಯ ಮೇರೆ ಮೀರಿತು.

ಮುಂದೆ ಇಂದ್ರನ ಕ್ರೀಡಾವನ. ವಿಚಿತ್ರವಾದ ವೃಕ್ಷಗಳು; ಲಾವಣ್ಯದ ಮೂರ್ತಿಗಳಾದ ಅಪ್ಸರೆಯರು; ಶೋಕವನ್ನೇ ಅರಿಯದ ಸ್ಥಳ; ನಿದ್ರೆ ಇಲ್ಲ, ಶೋಕ ಇಲ್ಲ, ರಾಗ ಇಲ್ಲ - ಎಂದೆಂದೂ ಅಲ್ಲಿ ನಿತ್ಯೋತ್ಸವ. ಇದನ್ನು ಕಂಡ ನಂದನಿಗೆ ಜರಾಮೃತ್ಯುವಶವಾದ, ಸದಾರ್ತವಾದ ಮನುಷ್ಯಲೋಕವು ಸ್ಮಶಾನದಂತೆ ತೋರಿತು. ಪುಣ್ಯವಂತರ ವಿಹಾರಭೂಮಿಯಲ್ಲಿ ನಿಂತ ನಂದನ ದೇಹ ಕಾಮದಿಂದ ಇನ್ನೂ ಉದ್ವಿಗ್ನವಾಯಿತು.

ವಪುಶ್ಚ ದಿವ್ಯಂ ಲಲಿತಾಶ್ಚ ಚೇಷ್ಟಾಸ್ತತಃ ಸ ತಾಸಾಂ ಮನಸಾ ಜಹಾರ;
ಕೌತೂಹಲಾವರ್ಜಿತಯಾ ಚ ದೃಷ್ಟ್ಯಾ ಸಂಶ್ಲೇಷಕರ್ಷಾದಿವ ಜಾತರಾಗಃ

ಅಪ್ಸರೆಯರ ಆ ವೈಭವದಲ್ಲಿ ದುರ್ಬಲನಾದವನ ಮನಸ್ಸು, ರಾಗ ಹಿಂಗದವನ ಮನಸ್ಸು, ದಹಿಸಿ ಹೋಗುವುದರಲ್ಲಿ ಏನು ಸಂಶಯ? ಅರ್ಹತನು

ಪಕ್ಕದಲ್ಲಿದ್ದು ನಂದನು ಬದುಕಿದ. ಭಾರ್ಯೆಯಲ್ಲಿ ಉದೀರ್ಣರಾಗನಾದ ನಂದನ ಚಿತ್ತ ಅದರಿಂದ ಆವೃತವಾಗಿ, ರಾಗದ ನಾಶವಾಗುವ ಸಲುವಾಗಿಯೇ ಬುದ್ಧನು ಈ ರಾಗದ ದರ್ಶನವನ್ನು ಮಾಡಿಸಿದ್ದು. ಸಣ್ಣ ದನಿಯನ್ನು ದೊಡ್ಡ ಶಬ್ದವು ಮುಳುಗಿಸುವಂತೆ, ಸಣ್ಣ ರೂಪವನ್ನು ದೊಡ್ಡ ರೂಪವು ಅಳಿಸುವಂತೆ, ಸಣ್ಣ ತಂಗಾಳಿಯನ್ನು ಬಿರುಗಾಳಿ ಓಡಿಸುವಂತೆ, ಮುಂಚೆ ರಾಗದಿಂದ ಮೃದುವಾಗಿ ಅಭಿತಪ್ತನಾಗಿದ್ದ ನಂದನು ಈಗ ರಾಗದ ದೊಡ್ಡ ಬೆಂಕಿಯಿಂದಲೇ ಆವೃತನಾಗಿದ್ದ. ಭೀತಿಯಿಂದ ನಂದನು "ಭಗವನ್, ಈ ಆಶ್ಚರ್ಯದಲ್ಲಿ ಬೆಂದುಹೋಗುತ್ತಿದ್ದೇನೆ, ತಥಾಗತ, ನಿನ್ನ ಮಾತಿನ ಅಮೃತವನ್ನು ಸವಿಯದಿದ್ದರೆ ನಾನು ಸಾಯುವುದು ನಿಶ್ಚಯ" ಎಂದು ದೈನ್ಯದಿಂದ ಬೇಡಿಕೊಂಡ.

ಅನರ್ಥಭೋಗೇನ ವಿಘಾತದೃಷ್ಟಿನಾ,
ಪ್ರಮಾದದಂಷ್ಟ್ರೇಣ ತಮೋವಿಷಾಗ್ನಿನಾ;
ಅಹಂ ಹಿ ದಷ್ಟೋ ಹೃದಿ ಮನ್ಮಥಾಹಿನಾ,
ವಿಧತ್ಸ್ವ ತಸ್ಮಾದಗದಂ ಮಹಾಭಿಷಕ್.

ಮೊದಲನೆಯ ಬಾರಿಗೆ ನಂದನಿಗೆ ಮೋಹವು ಒಂದು ಕ್ರೂರ ಸರ್ಪವೆಂಬ ಅರಿವಾಯಿತು. "ಧೈರ್ಯ ತಂದುಕೋ, ನಂದ, ಈ ವಿಕಾರವನ್ನು ಹೊರದೂಡು; ಮನಸ್ಸನ್ನು ಬಿಗಿಹಿಡಿ. ಈ ವೈಭವವು ಬಲದಿಂದಾಗಲೀ, ಸೇವೆಯಿಂದಾಗಲೀ, ರೂಪದಿಂದಾಗಲೀ ಪಡೆಯಲು ಶಕ್ಯವಲ್ಲ; ಧರ್ಮಚರ್ಯೆಯಿಂದ ಮಾತ್ರ ಸಾಧ್ಯ. ಸ್ವರ್ಗದಲ್ಲಿ ಇಷ್ಟೊಂದು ಪುಣ್ಯಲಾಭವು ಬೇರಾವುದರಿಂದಲೂ ಸಾಧ್ಯ ಇಲ್ಲ." ನಂದನಿಗೆ ತಾನು ಅನುಭವಿಸುತ್ತಿದ್ದ, ಆಶಿಸುತ್ತಿದ್ದ ಸುಖವು ಅಂತಿಮವಲ್ಲವೆಂಬ ಅರಿವು ಆಯಿತು. ಈ ಅರಿವು ಆದೊಡನೆ ಸ್ವರ್ಗನಿದರ್ಶನವೂ ಮರೆಯಾಯಿತು.

ಈಗ ನಂದನಿಗೆ ಸಂದಿಗ್ಧವಾದ ಪರಿಸ್ಥಿತಿಯೊಂದರ ಉದಯವಾಯಿತು. ದುರ್ದಮವಾದ, ಚಪಲವಾದ ಮನಸ್ಸನ್ನು ನಿಯಮಸ್ತಂಭಕ್ಕೆ ಕಟ್ಟಿದನು. ಕಾಮಚರ್ಯೆಯಲ್ಲಿ ಕುಶಲ; ಭಿಕ್ಷುಚರ್ಯೆಯಲ್ಲಿ ವಿಕ್ಲವ. ಅವನಲ್ಲಿ ಮನವು

ಶಾಂತವಾಗಿದೆ, ಸಂವೃತವಾಗಿದೆ, ತೀವ್ರವಾಗಿಯೂ ಇದೆ ನೀರು ಬೆಂಕಿಗಳ ಸಂಸರ್ಗದಂತೆ. ಅವನು ಉದ್ವಿಗ್ನನಾಗಲೂ ಇಲ್ಲ, ಶಾಂತನಾಗಿಯೂ ಇಲ್ಲ. ಸುಂದರಿಯ ಚಿಂತನೆಯಂತೂ ದೂರವಾಯಿತು. ಆದರೂ ಅವನದು ಇಷ್ಟವಿಲ್ಲದ 'ನೈಷ್ಕರ್ಮ್ಯ.'

ನಂದನು ಇಂಥ ಸ್ಥಿತಿಯಲ್ಲಿದ್ದಾಗ ಆನಂದನು (ಅರ್ಹತನ ನೆಚ್ಚಿನ ಶಿಷ್ಯ) "ಇದೀಗ ಸರಿಯಾಗಿ ಶುರುವಾಗಿದೆ; ನಂದನು ದಾರಿಯನ್ನು ಹಿಡಿಯುತ್ತಿದ್ದಾನೆ. ಮುಂದೆ ಮಾತ್ರ ಜಾಗ್ರತೆಯಿರಬೇಕು. ರೋಗ ಸಣ್ಣದಾದರೆ ಅಲ್ಪ ಚಿಕಿತ್ಸೆ; ರೋಗ ಉಗ್ರವಾದರೆ ಚಿಕಿತ್ಸೆಯೂ ಕಠೋರವಾಗಿರಬೇಕು. ನಂದನ ರೋಗ ಮಹತ್ತಾದದ್ದೆ; ಅವನು ಮೋಹದಿಂದ ತಿರುಗಿದ್ದರೆ ನಿಜವಾಗಿ ಧೈರ್ಯವಂತ" ಎಂದುಕೊಂಡು, "ನಂದ, ನನಗೊಂದು ಸಂಶಯ ಹುಟ್ಟಿದೆ; ನೀನು ಅನ್ಯಥಾ ಭಾವಿಸದಿದ್ದರೆ, ಹೇಳೆಂದು ಹೇಳಿದರೆ, ಹೇಳುತ್ತೇನೆ. ಸ್ನೇಹದಿಂದ ಮಾತ್ರ ಹೇಳುತ್ತಿದ್ದೇನೆ, ನಂದ. ಔಷಧಿಯ ಪಥ್ಯದಂತೆ ಪ್ರಿಯ-ಹಿತ ಎರಡೂ ಒಟ್ಟಿಗಿರುವುದು ದುರ್ಲಭ" ಎಂದನು.

ನಂದನು ಕೆಳಮುಖ ಮಾಡಿ, ನಿಟ್ಟುಸಿರು ಬಿಟ್ಟು ಯೋಚಿಸುತ್ತ ನಿಂತನು. ಅವನ ಇಂಗಿತವನ್ನು ಅರಿತು ಆನಂದನು "ನೀನು ನಿಯಮದ, ಬ್ರಹ್ಮ ಚರ್ಯದ ಕಡೆ ಒಲಿದಿರುವುದು ಸ್ವರ್ಗದ ಅಪ್ಸರೆಯರ ಸಲುವಾಗಿ. ವರ್ತಕನು ಲಾಭದ ದೃಷ್ಟಿಯಿಂದ ವ್ಯಾಪಾರ ಮಾಡುವಂತೆ, ನೀನು ಮಾಡಲಿರುವ ಧರ್ಮಚರ್ಯೆಯೂ ಪುಣ್ಯಭೂತವಾಗಿದೆ. ಹೃದಯದಲ್ಲಿ ಕಾಮದ ಬೆಂಕಿ ಇನ್ನೂ ಇದ್ದು, ದೇಹವನ್ನು ಮಾತ್ರ ದಂಡಿಸುತ್ತಿದ್ದರೆ, ಅದೆಂಥ ಬ್ರಹ್ಮಚರ್ಯೆ, ನಂದ? ಕಾಮದಲ್ಲಿ ಆಸೆಯು ಉಳಿದವನಿಗೆ ಶಾಂತಿಯೆಂಬುದು ಖಂಡಿತ ಇಲ್ಲ. ಕಾಮಗಳನ್ನು ಆಶಿಸುವುದೇ ದುಃಖ, ಅದು ಲಬ್ಧವಾಯಿತೆಂದರೆ ತೃಪ್ತಿಯಿಲ್ಲ, ವಿಯೋಗವಾದರಂತೂ ಶೋಕ ತಪ್ಪಿದ್ದಲ್ಲ. ವಿಯೋಗವಂತೂ ಅನಿವಾರ್ಯ. ಕಷ್ಟಪಟ್ಟು ಸ್ವರ್ಗವನ್ನು ಸಂಪಾದಿಸಿದರೂ, ಮತ್ತೆ ಭೂಲೋಕ

ತಪ್ಪಿದ್ದಲ್ಲ; ಪ್ರವಾಸಕ್ಕೆಂದು ಹೋದವರು ಮತ್ತೆ ಮನೆಗೆ ಹಿಂದಿರುಗರೇ? ಇದ್ದ ಸುಖವನ್ನೆಲ್ಲ ಸ್ವರ್ಗದಲ್ಲನುಭವಿಸಿದ ಮೇಲೆ, ಉಳಿದ ದುಃಖವನ್ನು ಇಲ್ಲಿ ಅನುಭವಿಸಬೇಕಷ್ಟೆ. ಅಜ್ಞಾನಸೂತ್ರದಿಂದ ಕಟ್ಟಿದ ಈ ಮಾನವ ಪಕ್ಷಿ ಎಲ್ಲೆಲ್ಲಿ ಹಾರಿದರೂ, ಕಡೆಗೆ ಬಂಧನ ಸ್ಥಾನಕ್ಕೇ ಬರಬೇಕಲ್ಲವೆ? ನಂದ, ಈ ಜಗತ್ತಿನ ಸಂಸಾರ ಜನ್ಮ ವ್ಯಾಧಿ, ಮೃತ್ಯು, ವ್ಯಸನಗಳಿಂದ ತುಂಬಿದ್ದು. ಆದರೆ ನಿರ್ಭಯವಾದದ್ದು, ಮಂಗಳವಾದದ್ದು, ಜರಾಮರಣಗಳನ್ನು ದಾಟಿದ್ದು, ಶೋಕ ಇಲ್ಲದ್ದು, ಧ್ರುವವಾದದ್ದು ; ಎಂದರೆ ನಿರ್ವಾಣ, ಶಾಂತಿ. ಅದನ್ನು ಪಡೆಯಬೇಕೆಂದರೆ ಸ್ವರ್ಗಸುಖದಾಸೆ ಬಿಟ್ಟು, ಧರ್ಮಚರ್ಯೆ ಮಾಡಬೇಕು."

ಅಪ್ಸರೆಯರಿಗಾಗಿ ಧರ್ಮಚರ್ಯೆ ಮಾಡುತ್ತೀ ಎಂದು ಆನಂದ ತನಗೆ ಹೇಳಿದ್ದನ್ನು ಕೇಳಿ ನಂದನಿಗೆ ಬಲು ನಾಚಿಕೆಯಾಯಿತು; ಸಂವೇಗ ಉಂಟಾಯಿತು. ಅಪ್ಸರೆಯರಿಂದ ಸುಂದರಿಯ ಚಿಂತೆ ಹೇಗೆ ದೂರವಾಯಿತೋ, ಹಾಗೆಯೇ ಈ ಸಂವೇಗದಿಂದ ಸ್ವರ್ಗದ ಚಿಂತೆಯೂ ದೂರವಾಯಿತು; ಶ್ರೇಯಸ್ಸಿನ ಕಡೆ ಮನಸ್ಸು ಮೊದಲ ಬಾರಿ ಹರಿಯಿತು; ಧರ್ಮದ ಬೀಜಗಳು ಮೊಳೆಯತೊಡಗಿದವು. ಅರ್ಹತನಾದ ತಥಾಗತನಿಗೆ ತನ್ನ ಮನಸ್ಸನ್ನು ಹೇಳುವ ಸಲುವಾಗಿ ನಂದನು ತಥಾಗತನೆಡೆಗೆ ಬಂದು, ನಮಸ್ಕರಿಸಿ, ಲಜ್ಜೆಯಿಂದ ಕೆಳಮುಖ ಮಾಡಿ "ಭಗವನ್, ಭೂಮಿಯಲ್ಲಾಗಲಿ, ಸ್ವರ್ಗದಲ್ಲಾಗಲಿ ನನಗೆ ಪ್ರವೃತ್ತಿ ಇರದು; ಸಂಸಾರದ ನಿಜಸ್ವರೂಪವನ್ನು ತಿಳಿದಿದ್ದೇನೆ. ಸರ್ವದುಃಖಕ್ಷಯಕರವಾದ, ಅತ್ಯುತ್ತಮವಾದ ಧರ್ಮದ ಕಡೆ ಮನಸ್ಸು ಒಲಿದಿದೆ. ಅರ್ಹತನು ಅನುಗ್ರಹಿಸಿ ಬೋಧೆ ಮಾಡಬೇಕು" ಎಂದನು.

ಬುದ್ಧನು "ಸಾಧು, ನಂದ, ನೈಷ್ಕರ್ಮ್ಯಕ್ಕೆ ಮನಸ್ಸು ಕೊಟ್ಟಿರುವ ನೀನು ಧನ್ಯ. ಸಂಸಾರದ ತ್ರಾಸವು ಹೇಯವೆಂಬ ನಿನ್ನ ಅಭಿಮತವು ಖಂಡಿತವಾಗಿ ಮಾನನೀಯವಾದದ್ದು. ಧರ್ಮದ ಉತ್ಪತ್ತಿಗೆ ಶ್ರದ್ಧೆಯೇ ಉತ್ತಮವಾದ

ಚಿತ್ರ 7

ಸಾಧನ. ಶ್ರದ್ಧೆಯ ಬೀಜವನ್ನು ನೆಟ್ಟು ಬೆಳೆಸಬೇಕು, ನಂದ, ಶ್ರದ್ಧೆ ಬೆಳೆದರೆ ಧರ್ಮ ಬೆಳೆಯುವುದು; ಧರ್ಮಕ್ಕೆ ಶ್ರದ್ಧೆಯೇ ಮೂಲ. ತತ್ತ್ವವನ್ನು ತಿಳಿದುಕೊಂಡು, ಇಂದ್ರಿಯಗಳನ್ನು ಬಿಗಿಹಿಡಿದು, ನಿಯಮದಲ್ಲಿ ನಿಂತರೆ, ಶ್ರದ್ಧೆಯ ಮರ ಫಲ ಕೊಟ್ಟು, ಆಶ್ರಯವಾಗುತ್ತದೆ" ಎಂದು ಪ್ರೀತಿಯಿಂದ ಉಪದೇಶ ಮಾಡಿದನು.

ನಂದನ ಸಂತೋಷ ಹಿಡಿಸದಾಯಿತು; ಸಮ್ಯಕ್ಸಂಬುದ್ಧನಿಂದ ಸಂಸ್ಕೃತನಾದ ಅವನು ತನಗೆ ಶ್ರೇಯಸ್ಸು ಸಂದಂತೆಯೇ ಎಂದು ತಿಳಿದನು. ಮಹಾಕಾರುಣಿಕನಾದ ಬುದ್ಧನಿಗಾದರೋ ಈ ಜೀವಿಗಳನ್ನು ದುಃಖದಿಂದ ಹೇಗೆ ನೀಗಿಸಲಿ ಎಂಬುದೇ ಸರ್ವದಾ ಅನುಕಂಪ. ನಂದನಿಗೆ ಶ್ರೇಯಸ್ಸಿನ ಕ್ರಮವನ್ನು ವಿವರಿಸಲು, ಅವನಿಗೆ ಆಸಕ್ತಿ ಹುಟ್ಟಿ ಹೀಗೆ ಹೇಳಿದನು - "ಶ್ರದ್ಧೆಯನ್ನು ಮುಂದೆ ಮಾಡಿಕೊಂಡು ಅಮೃತವಾದ ಸ್ಥಿತಿಯನ್ನು ಪಡೆಯಲು ವೃತ್ತವನ್ನು ರಕ್ಷಿಸಬೇಕು. ಶರೀರ ಹಾಗೂ ಮಾತು, ಇವುಗಳಲ್ಲಿ ಶುದ್ಧಿಯಾಗಲು ನಿರ್ಮಲವಾದ ಆಜೀವ ಸಮುದಾಚಾರವನ್ನು ಅಭ್ಯಸಿಸಬೇಕು. ಶೀಲವನ್ನು ಬಿಟ್ಟು ಕದಲಬಾರದು; ಶೀಲ ತಪ್ಪಿದನೆಂದರೆ ಅವನು ಸನ್ಯಾಸಿಯೂ ಅಲ್ಲ, ಗೃಹಸ್ಥನೂ ಅಲ್ಲ. ಶ್ರೇಯಸ್ಸಿನಲ್ಲಿ ಎಲ್ಲ ಕಾರ್ಯಗಳೂ ಶೀಲದ ಮೇಲೆ ನಿಂತಿವೆ. ಚಾರಿತ್ರಸಂಪನ್ನನಾಗಿರಬೇಕು, ದೃಢವ್ರತನಾಗಿರಬೇಕು, ಬ್ರಹ್ಮಚಾರಿಯಾಗಿರಬೇಕು. ಸುಖದ ಪರಾಕಾಷ್ಠತೆಯೆಂದರೆ ದೇಹದ ಹಾಗೂ ಮನಸ್ಸಿನ 'ಪ್ರಶ್ರಬ್ಧಿ'. ಅದು ಶೀಲದಿಂದಲೇ ಲಭ್ಯ. ನಂದ, ಶೀಲವೇ ಶರಣ, ಆಚಾರ್ಯ, ಮಿತ್ರ, ರಕ್ಷೆ, ಧನ, ಅದೇ ಬಲ. ಸ್ವಭಾವತಃ ಚಂಚಲವಾದ ಇಂದ್ರಿಯಗಳನ್ನು ಪ್ರಜ್ಞೆಯ ದೀಪದ ಸಹಾಯದಿಂದ ಬಿಗಿಹಿಡಿ. ನೀರು ಸಂತತವೂ ಸಮುದ್ರವನ್ನು ಸೇರುತ್ತಿದ್ದರೂ ಸಮುದ್ರಕ್ಕೆ ತೃಪ್ತಿಯೆಂಬುದು ಉಂಟೆ? ಹಾಗೆಯೇ ವಿಷಯಗಳ ಭೋಗದಿಂದ ಇಂದ್ರಿಯಗಳಿಗೆ ತೃಪ್ತಿಯಿಲ್ಲ. ಕಟ್ಟಿಗೆ ಇದ್ದು, ಗಾಳಿಯೂ ಇದ್ದರೆ ಬೆಂಕಿ ಉರಿಯುವುದು ಕಷ್ಟವೇ? ವಿಷಯಗಳಿದ್ದು, ಅವುಗಳ ಪರಿಕಲ್ಪವೂ ಇದ್ದರೆ ಕ್ಲೇಶಕ್ಕೇನು ಕೊರತೆ? ಆದರೆ

ವಿಷಯವು ತಾನೇ ಬಂಧದ ಅಥವಾ ಮೋಕ್ಷದ ಕಾರಣವಾಗಲಾರದು; ಅದಕ್ಕೆ ಪರಿಕಲ್ಪದ ಸಹಾಯ ಇದ್ದರೆ ಮಾತ್ರ ಬಂಧ ಅಥವಾ ಮೋಕ್ಷ. ಅದುಕಾರಣ, ಇಂದ್ರಿಯಗಳನ್ನು ದಮನಮಾಡಬೇಕಾದುದು ಅಗತ್ಯ; ಇಂದ್ರಿಯವು ಸ್ವೇಚ್ಛೆಯಾಗಿದ್ದರೆ ದುಃಖ ಖಂಡಿತ. ಬಲು ಜಾಗರೂಕತೆಯಿಂದಿರಬೇಕು, ನಂದ. ಒಂದು ಕ್ಷಣ ಎಚ್ಚರ ತಪ್ಪಿದರೂ ಅನರ್ಥ."

"ಇಂದ್ರಿಯಗಳನ್ನು ಪ್ರಜ್ಞೆಯಿಂದ ಬಿಗಿ ಹಿಡಿದು ಧ್ಯಾನದೆಡೆ ಮನಸ್ಸು ಬಿಡಬೇಕು. ಯಾವುದಾದರೂ ಅತಿ ಒಳ್ಳೆಯದಲ್ಲ. ತಕ್ಕಡಿಯಲ್ಲಿ ಹೇಗೆ, ಭಾರ ಹೆಚ್ಚಿದರೆ ಕುಗ್ಗಿ, ಹಗುರವಾದರೆ ಏರಿ, ಸರಿಯಾಗಿದ್ದರೆ ಸಮಸ್ಥಿತಿಯಲ್ಲಿರುವುದೋ, ಹಾಗೆಯೇ ಆಹಾರದಲ್ಲೂ ಭೋಜನೈಕಪರಾಯಣನಾದರೆ ಅನರ್ಥ; ನಿರಾಹಾರನಾದರೆ ಸಾಮರ್ಥ್ಯವಿಲ್ಲ. ಒಲೆಯ ತುಂಬ ಕಟ್ಟಿಗೆಯನ್ನು ತುಂಬಿದರೆ ಬೆಂಕಿ ಉರಿಯುವುದು ಹೇಗೆ? ಅಥವಾ ಕಟ್ಟಿಗೆಯೇ ಇಲ್ಲದಿದ್ದರೆ ಬೆಂಕಿ ಉರಿಯುವುದೋ? ಭೋಜನವೆಂಬುದು ಶರೀರದ ಧಾರಣೆಗಾಗಿ; ಮುರುಕು ಮನೆ ಬೀಳದಂತೆ ಕಂಬವನ್ನು ಇಟ್ಟಿರುವಂತೆ. ನಿದ್ರೆಯಲ್ಲೂ ಹಾಗೆಯೇ.

> 'ಪ್ರದೀಪ್ತೇ ಜೀವಲೋಕೇ ಹಿ ಮೃತ್ಯುವ್ಯಾಧಿಜರಾಗ್ನಿಭಿಃ;
> ಕಃ ಶಯೀತ ನಿರುದ್ವೇಗಃ ಪ್ರದೀಪ್ತ ಇವ ವೇಶ್ಮನಿ.'

ನಿದ್ರೆಯೆಂಬುದು ತಮಸ್ಸು. ದೇಹದ ವಿಶ್ರಾಂತಿಗೆ ನಿದ್ದೆ. 'ಪ್ರಬೋಧಂ ಹೃದಯೇ ಕೃತ್ವಾ ಶಯೀಥಾ ಶಾಂತಮಾನಸಃ'.

ಬಾಗಿಲಲ್ಲಿ ರಕ್ಷಕನು ನಿಂತಂತೆ, ಪ್ರಜ್ಞೆಯನ್ನು ದೇಹದಲ್ಲಿ ನಿಲ್ಲಿಸಿದಲ್ಲಿ, ಚೆನ್ನಾಗಿ ರಕ್ಷಿಸಲ್ಪಟ್ಟ ಪಟ್ಟಣವನ್ನು ಶತ್ರುಗಳು ಹೇಗೆ ಧಾಳಿ ಮಾಡಲಾರರೋ, ಹಾಗೆಯೇ ದೋಷಗಳು ಮನಸ್ಸನ್ನು ಮುಟ್ಟಲಾರವು; ಶೋಕದ ಸುಳಿವೇ ಇರಲಾರದು. ಮಗುವನ್ನು ತಾಯಿ ಕಾಪಾಡುವಂತೆ ಶರೀರದಲ್ಲಿ ನಿಂತ

ಚಿತ್ರ 8

ಪ್ರಜ್ಞೆ ಮನಸ್ಸನ್ನು ಎಲ್ಲ ಸ್ಥಿತಿಗಳಲ್ಲೂ ರಕ್ಷಿಸುತ್ತದೆ. ಪ್ರಜ್ಞೆ ರಕ್ಷಿಸದ ಮನಸ್ಸು ಅನಾಥ; ದಾರಿಯನ್ನು ತೋರಿಸುವವರು ಯಾರೂ ಇಲ್ಲದೆ, ಕುರುಡನು ಗೋಡೆಗೆ ತಲೆ ಘಟ್ಟಿಸಿಕೊಂಡಂತೆ ಅನರ್ಥ. ಪ್ರಜ್ಞೆಯಿಲ್ಲದೆ 'ಆರ್ಯನಯ' ಇಲ್ಲ; ಆರ್ಯನಯವಿಲ್ಲದಿದ್ದರೆ ಒಳ್ಳೆಯ ದಾರಿ ಕಾಣಿಸಲಾರದು; ಅದಿಲ್ಲದಿದ್ದರೆ ಅಮೃತದ ಪದ ನಷ್ಟವಾದಂತೆಯೇ; ಅಮೃತ ಪದ ನಷ್ಟವಾದರೆ ದುಃಖ ಎಂದೂ ಬಿಡಲಾರದು. ಅದು ಕಾರಣ ಪ್ರಜ್ಞೆಯು ಸರ್ವದಾ ಜಾಗ್ರತವಾಗಿರಬೇಕು.

ಚಿತ್ತವು ಚಪಲವಾದದ್ದು; ಅದನ್ನು ಒಂದೆಡೆ ನಿಲ್ಲಿಸಬೇಕು. ಅದಕ್ಕೆ ಆಲಂಬನವೊಂದನ್ನು ತೋರಿಸಿ ಅದರಲ್ಲಿ ಅದನ್ನು ನೆಡಬೇಕು. ಕಾಮಗಳನ್ನು ಅವು ಉದ್ಭವವಾದಂತೆಲ್ಲ, ಬೆಳಕು ಕತ್ತಲೆಯನ್ನು ನಾಶಮಾಡುವ ಹಾಗೆ, ನಿರ್ದಾಕ್ಷಿಣ್ಯವಾಗಿ ಸಂಹರಿಸಬೇಕು. ಹಾಗೆ ಮಾಡದಿದ್ದರೆ ಅವುಗಳ 'ಅನುಶಯ'ವು ಬೂದಿ ಮುಚ್ಚಿದ ಕೆಂಡದಂತೆ ಇದ್ದೇ ಇರುತ್ತದೆ; ನೀರಿನಿಂದ ಕೆಂಡವನ್ನು ಆರಿಸುವಂತೆ, 'ಭಾವನೆ'ಯಿಂದ ಅದನ್ನು ಶಮನಮಾಡಬೇಕು. ಈ ಬೀಜದಿಂದಲೇ ದುಃಖದ ಮರವು ಬೆಳೆಯುವುದು; ಬೀಜವನ್ನೇ ನಾಶಮಾಡಿದರೆ ಒಳ್ಳೆಯದಲ್ಲವೆ? ಕಾಮಗಳು ಅನಿತ್ಯ; ಇಂದಿದ್ದು ನಾಳೆ ಮರೆಯಾಗುವ ಸ್ವಭಾವದವು; ಮತ್ತೆ ವ್ಯಸನಕ್ಕೆ ಕಾರಣ. ಅವುಗಳನ್ನು ಹುಡುಕುತ್ತ, ಹಿಂಬಾಲಿಸುತ್ತ ಹೋದರೆ ಅದು ದುಃಖಕ್ಕೆ ದಾರಿ, ಶಾಂತಿಗಲ್ಲ. ಧನದಲ್ಲಿ ತೃಪ್ತಿ, ಸ್ವರ್ಗದಲ್ಲಿ ಕೃತಾರ್ಥತೆ, ಕಾಮದಲ್ಲಿ ಸುಖ ಕಾಣುವವರು ಹಾಳಾಗುತ್ತಾರೆ. ಚಂಚಲವಾದ, ಸಾರವಿಲ್ಲದ, ಬುಡವಿಲ್ಲದ, ಸುಖದಂತೆ ಭ್ರಾಂತಿ ಮಾಡುವ ಕಾಮಗಳನ್ನು ಮರೆಯುವ ಯತ್ನಮಾಡು, ನಂದ. ಅವುಗಳಿಗೆ ಶತ್ರುಗಳು ಎಂದರೆ ಮೈತ್ರಿ, ಕರುಣೆ. ಬೆಳಕಿಗೂ ಕತ್ತಲೆಗೂ ಇರುವಷ್ಟು ವಿರೋಧ ಕಾಮ-ಮೈತ್ರೀಕರುಣೆಗಳ ಮಧ್ಯೆ. ಸ್ನಾನಮಾಡಿದವನ ಮೈಯಿಂದ ಕೊಳೆ ಹೋಗುವಂತೆ ನಿವೃತ್ತನಾದವನಿಂದ ದೌಃಶೀಲ್ಯ ಹೋಗುತ್ತದೆ. ಎಲ್ಲ ಜೀವಿಗಳಲ್ಲೂ ಮೈತ್ರಿ, ಕರುಣೆ ಇರಬೇಕು; ಹಿಂಸೆ

ಮಾಡುವುದು ಸರ್ವಥಾ ಯುಕ್ತವಲ್ಲ. ಅಕುಶಲವಾದುದನ್ನು ಬಿಟ್ಟು ಕುಶಲದ ಕಡೆ ಪ್ರಯತ್ನ ಮಾಡಬೇಕು - ಅದು ಪರಮಾರ್ಥವನ್ನು ಪಡೆದುಕೊಳ್ಳಲು ದಾರಿ. ಕಾಮಗಳನ್ನು ಭೋಗಿಸುವ ಯೋಚನೆ ಇದ್ದರೆ, ಅದರಿಂದ ಬಂಧನವಲ್ಲದೆ ಗುಣವಿಲ್ಲ; ಬೇರೆಯವರಿಗೆ ಹಿಂಸೆ, ತನಗೆ ವ್ಯಸನ. ಅಕುಶಲವಾದ ವಿತರ್ಕಗಳಿಂದ ನಿನ್ನ ನಾಶವನ್ನು ನೀನೇ ಮಾಡಿಕೊಳ್ಳುತ್ತೀಯೆ; ಮನುಷ್ಯತ್ವವು ವ್ಯರ್ಥ ಮಾತ್ರವಲ್ಲ, ಅನರ್ಥಕಾರಿಯಾಗುತ್ತದೆ.

ಯಾರು ಸ್ವಜನ, ಯಾರು ಪರಜನ, ನಂದ? ಸಂಜೆಯಾದರೆ ಹಕ್ಕಿಗಳು ಒಟ್ಟಿಗೆ ಸೇರುತ್ತವೆ, ಬೆಳಗಾದರೆ ಬೇರೆ ಬೇರೆ ಹಾರಿ ಹೋಗುತ್ತವೆ. ತಮ್ಮ ಕರ್ಮಗಳಿಂದ ಈ ಸಂಸಾರಕ್ಕೆ ಬಂದಿರುವ ಜನಕ್ಕೆ ಸ್ವಜನ ಎಂದರೇನು? ದಾರಿಹೋಕರು ಬೇರೇ ಬೇರೇ ದಾರಿಗಳಲ್ಲಿ ಹೋಗುವಂತೆ, ಸಂಸಾರದಲ್ಲಿ ತಮ್ಮ ತಮ್ಮ ಪ್ರಕೃತಿ ಹಿಡಿದು ಹೋಗುವಲ್ಲಿ, ಜ್ಞಾತಿ ಸಮಾಗಮಕ್ಕೆ ಅರ್ಥವಿಲ್ಲ. ಚಿತ್ರಕಾರನು ಹೆಂಗಸಿನ ಚಿತ್ರವನ್ನು ತಾನೇ ಬರೆದು ಅದರಲ್ಲಿ ಮೋಹಪಡುವಂತೆ, ಜನರು ತಾವೇ ಸ್ನೇಹ ಮಾಡಿ ಜನದಲ್ಲಿ ಸೇರುತ್ತಾರೆ. 'ತನ್ನವರು', 'ಬೇರೆಯವರು' ಎನ್ನುವ ವಿತರ್ಕಕ್ಕೆ ಅರ್ಥವಿಲ್ಲ, ನಂದ; ಸಂಸಾರದಲ್ಲಿ ವ್ಯವಸ್ಥೆಯಿರದು.

ತಮ್ಮ ದೋಷಗಳಿಂದ ಉರಿಯುತ್ತಿರುವ ಈ ಜಗತ್ತು, ದೋಷಗಳ ಬೆಂಕಿಯ ಬೆಳಕೇ ಈ ಜೀವನ, ಎಂದರಿಯಬೇಕು; ಎಲ್ಲೆಲ್ಲೂ ದುಃಖ ಇದೆ; ಮಂಗಳವಾದದ್ದು ಯಾವುದೂ ಇಲ್ಲ, ನಂದ. ದೇಹ ಇರುವಲ್ಲೆಲ್ಲ ದುಃಖ ಇದೆ; ರೋಗ, ಮುಪ್ಪು, ಸಾವು ಇಲ್ಲದ ದೇಶ ಯಾವುದು? 'ದುಃಖಂ ಸರ್ವತ್ರ ಸರ್ವಸ್ಯ ವರ್ತತೇ ಸರ್ವದಾ', 'ಜೀವಲೋಕಂ... ಸರ್ವಮಾದೀಪ್ತಂ'. ತಾನು ಬಲಿಷ್ಠ, ತಾನು ಯುವಕ ಎಂದು ತಡಮಾಡುವುದು ಅನರ್ಥ; ದೇಹದಲ್ಲಿ ಹೊಕ್ಕ ರೋಗವನ್ನು ಪ್ರಯತ್ನದಿಂದ ಹೊರ ಹೊರಡಿಸುವಂತೆ ಈ ವಿತರ್ಕವನ್ನೂ ಹೊರಡಿಸಬೇಕು.

ಚಿತ್ರ 9

ಯಾರಿಂದಲೂ ಏನಿಂದಲೂ ಸಾವನ್ನು ತಡೆಯುವುದು ಸಾಧ್ಯವಲ್ಲ, ನಂದ; ಆದ್ದರಿಂದ ಆಯುಸ್ಸು ದೊಡ್ಡದಾಗಿದೆ ಎಂದು ವಿಳಂಬ ಮಾಡುವುದು ಹೆಡ್ಡತನ. ಲೋಕ ನಿಃಸಾರ, 'ತೋಯಬುದ್ಬುದ ದುರ್ಬಲ', ಎಂದು ಅರಿತು ವಿತರ್ಕವನ್ನು ಭೇದಿಸಬೇಕು. ಕ್ಲೇಶಗಳಿಂದ ಮನಸ್ಸನ್ನು ವಿಶೋಧಿಸಿ, ಶಮನಮಾಡಬೇಕು, ಸೌಮ್ಯ.

ಹೀಗೆ ಮನಸ್ಸನ್ನು ನಿಲ್ಲಿಸಿ, ನಾಲ್ಕು ಆರ್ಯ ಸತ್ಯಗಳನ್ನು ತಿಳಿಯಬೇಕು.

ಬಾಧಾತ್ಮಕಂ ದುಃಖಮಿದಂ ಪ್ರಸಕ್ತಂ
ದುಃಖಸ್ಯ ಹೇತುಃ ಪ್ರಭಾವಾತ್ಮಕೋಽಯಂ
ದುಃಖಕ್ಷಯೋ ನಿಃಸರಣಾತ್ಮಕೋಽಯಂ
ತ್ರಾಣಾತ್ಮಕೋಽಯಂ ಪ್ರಶಮಾಯ ಮಾರ್ಗಃ'

೧. ಇವೆಲ್ಲವೂ ದುಃಖವೇ;

೨. ದುಃಖಕ್ಕೆ ಕಾರಣವಿದೆ;

೩. ದುಃಖವನ್ನು ತೊಲಗಿಸಿಕೊಳ್ಳುವುದು ಸಾಧ್ಯ;

೪. ಅದಕ್ಕೊಂದು ದಾರಿಯಿದೆ.

ಇವು ನಾಲ್ಕು ಆರ್ಯಸತ್ಯಗಳು.

ಈ ಸತ್ಯವನ್ನು ತಿಳಿಯದಿದ್ದರೆ ಸಂಸಾರದ ಉಯ್ಯಾಲೆಯ ಮೇಲೆ ಕೂತು ಜನ ಜನ್ಮದಿಂದ ಜನ್ಮಕ್ಕೆ ಹೋಗುತ್ತಿರುತ್ತಾರೆ. ಮುಪ್ಪು, ಸಾವು, ಮುಂತಾದ ದುಃಖಗಳಿಗೆ ಮೂಲವು ಹುಟ್ಟುವುದು; ಎಲ್ಲ ಮೂಲಿಕೆಗಳಿಗೂ ಮೂಲವಾಗಿ ಭೂಮಿಯು ಇರುವಂತೆ. ಹುಟ್ಟುವುದರಿಂದ ರೂಪ, ಇಂದ್ರಿಯ, ಐಶ್ವರ್ಯಗಳಿಗೆ ಆಸರೆ ಸಿಕ್ಕಂತೆಯೇ. ಸಾವು, ರೋಗ, ಮುಪ್ಪಿಗೂ ಆಸರೆಯಾಗುತ್ತದೆ; ವಿಷಮಿಶ್ರಿತವಾದ ಅನ್ನದಂತೆ, ಹುಟ್ಟುವುದರಿಂದ ಅನರ್ಥ ವಿನಾ ಪ್ರಯೋಜನ ಏನಿಲ್ಲ. ಚಂಡಮಾರುತವೇ ಬೀಸಿದರೂ ಹುಟ್ಟದಿದ್ದ ಮರ ಎಲ್ಲಿಯಾದರೂ ಅಲ್ಲಾಡುವುದುಂಟೇ, ನಂದ? ಆಕಾಶದಿಂದ ಮಳೆ,

ಕಟ್ಟಿಗೆಯಿಂದ ಬೆಂಕಿ, ಭೂಮಿಯಿಂದ ನೀರು ಜನಿಸುವಂತೆ ದೇಹ-ಮನಸ್ಸುಗಳಿಂದ ದುಃಖವು ಜನಿಸುತ್ತದೆ.

ನೀರಿನ ಸ್ವಭಾವ ಹರಿಯುವುದು, ಭೂಮಿಯ ಸ್ವಭಾವ ದುಃಖ; ಆಸೆಯೇ ಜನ್ಮದ ಕಾರಣವೆಂದು ತಿಳಿ; ದುಃಖದಿಂದ ಪಾರಾಗುವ ಇಚ್ಛೆಯಿದ್ದರೆ ಆಶೆಗಳನ್ನು ಬಿಡು. ಕಾರಣದ ಸಂಕ್ಷಯದಿಂದ ಕಾರ್ಯಕ್ಷಯ. ಕ್ಷೇಮವಾದ, ನೈಷ್ಠಿಕವಾದ, ಅಚ್ಯುತವಾದ, ಶಾಂತವಾದ, ಮಂಗಳವಾದ ಧರ್ಮವನ್ನು ಧೈರ್ಯವಾಗಿಟ್ಟುಕೊಳ್ಳಬೇಕು. ಎಣ್ಣೆ ಮುಗಿದುಹೋಗಿ ದೀಪ ಆರಿಹೋದರೆ ಅದು ಹೇಗೆ ಚಲಿಸುವುದು ಬಿಟ್ಟು ಕೇವಲವಾದ ಶಾಂತಿಯನ್ನು ಪಡೆಯುವುದೋ, ಹಾಗೆಯೇ ದುಃಖಗಳ ನಾಶದಿಂದ ನಿನಗೆ ಕೇವಲವಾದ ಶಾಂತಿ ದೊರಕುವುದು. ಒಳ್ಳೆಯಸ ನಡೆನುಡಿ, ಸಹಕಾರ್ಯಕರ್ಮ, ಶುದ್ಧವಾದ ಆಜೀವನ ಈ ಮೂರು ಕರ್ಮಪರಿಗ್ರಹಕ್ಕಾಗಿ ಆಚಾರದಲ್ಲಿ ಶೀಲವನ್ನಾಶ್ರಯಿಸಿ ನಡೆಯುವುವು.

ದುಃಖ, ದುಃಖಸಮುದಯ, ನಿರೋಧ, ಮಾರ್ಗ ಈ ನಾಲ್ಕು ಆರ್ಯಸತ್ಯಗಳ ಅರಿವು, ಒಳ್ಳೆಯ ವಿತರ್ಕ ಮತ್ತು ಪರಾಕ್ರಮ, ಈ ಮೂರೂ ದುಃಖದ ನಾಶಕ್ಕಾಗಿ ಜ್ಞಾನದಲ್ಲಿ ಪ್ರಜ್ಞೆಯನ್ನಾಶ್ರಯಿಸಿ ನಡೆಯುವುವು. ಸಮ್ಯಕ್ಸ್ಮೃತಿ, ಸಮ್ಯಕ್ಸಮಾಧಿ ಈ ಎರಡು ಮನಸ್ಸನ್ನು ಬಿಗಿಹಿಡಿಯುವ ಸಲುವಾಗಿ ಯೋಗದಲ್ಲಿ ಶಮವನ್ನು ಆಶ್ರಯಿಸಿ ನಡೆಯುವುವು. ದೊಡ್ಡ ಬೆಟ್ಟವು ವೇಗವಾಗಿ ಹರಿಯುವ ನದಿಯನ್ನು ತಡೆಗಟ್ಟುವಂತೆ ಸಮಾಧಿಯು ಕ್ಲೇಶಗಳನ್ನು ತಡೆಯುತ್ತದೆ; ಮಂತ್ರಬದ್ಧವಾದ ಹಾವು ಬಲಹೀನವಾದಂತೆ, ಸಮಾಧಿಯಲ್ಲಿರುಪವಸನ್ನು ದೋಷಗಳು ಮುಟ್ಟಲಾರವು.

ಪ್ರಜ್ಞೆಯಿಂದ ದೋಷಗಳು ಸಂಪೂರ್ಣವಾಗಿ ನಾಶವಾಗುತ್ತವೆ; ದುಃಖದ ಮೂಲವಾದ ಈ ದೋಷಗಳು ಸತ್ತದ್ದರಿಂದಾಗಿ ಮಂಗಳವಾದ ಸ್ಥಿತಿಯ ಉದಯವಾಗುತ್ತದೆ. ದುಃಖವೇ ಪ್ರವೃತ್ತಿ; ದೋಷಗಳೇ ಪ್ರವರ್ತಕ. ಆದ್ದರಿಂದ ನಿವೃತ್ತಿ ಮಾರ್ಗ ಹಿಡಿಯಬೇಕು. ಈ ನಾಮರೂಪದ ಜಗತ್ತೆಲ್ಲ ಇಂದಿದ್ದು

ನಾಳೆ ಮರೆಯಾಗುವುದೆಂದು ತಿಳಿದು 'ನಿರ್ವೇದ'ವನ್ನು ಪಡೆದರೆ, ಸಂತೋಷದ ನಾಶವಾಗಿ ಅದರಿಂದ ಆಶೆಯ ನಾಶವೂ ಸಿದ್ಧಿಸುತ್ತದೆ. ಹೀಗೆ ಸಂತೋಷ-ಆಶೆಗಳು ಅಳಿಯುವುದೇ ಮನಸ್ಸಿನ ಮೋಕ್ಷ. ನಾಮ-ರೂಪದ ಜಗತ್ತಿನ ಸ್ವಭಾವ, ಮೂಲ, ಮತ್ತು ನಾಶ ಇವುಗಳನ್ನು ತಿಳಿದು ಕಾಣುವುದೇ 'ಆಸ್ರವ'ದ ಕ್ಷಯ. ಜಗತ್ತಿನ ಸ್ವರೂಪವನ್ನು ತಿಳಿಯುವುದೇ ಜಗತ್ತಿನಿಂದ ಪಾರಾಗಲು ದಾರಿ.

ಆದರೆ ದೇಶ-ಕಾಲಗಳನ್ನು ತಿಳಿದು ಕೆಲಸ ಮಾಡಬೇಕು. ಈಯದ ಮುನ್ನ ಹಸುವನ್ನು ಕರೆದರೆ ಹಾಲು ಕೊಡುವುದೇ? ಅಥವಾ ಕರು ಇದ್ದಾಗಲೂ ಹಸುವಿನ ಕೊಂಬಿನಿಂದ ಕರೆದರೆ ಹಾಲು ಬರುವುದೇ? ದೇಶ-ಕಾಲಗಳನ್ನು ಸರಿಯಾಗಿ ಪರೀಕ್ಷೆಮಾಡಿ, ಯೋಗದ ಸ್ವಭಾವ, ರೀತಿಗಳನ್ನು ತಿಳಿದು ಮುಂದುವರಿಯಬೇಕು. ಉರಿಯುತ್ತಿರುವ ಬೆಂಕಿಯನ್ನು ನೀರಿನಿಂದ ಆರಿಸುವಂತೆ ಮನಸ್ಸನ್ನು ಶಮನಮಾಡಲು ಆಗ ಸಾಧ್ಯ. ಹಸಿವಿದ್ದರೂ ವಿಷ ಸೇರಿದ ಅನ್ನವನ್ನು ಯಾರು ತಾನೆ ತಿಂದಾರು? ಅಂತೆಯೇ ಈ ಜಗತ್ತನ್ನು ದೋಷಯುತವಾದದ್ದೆಂದು ತಿಳಿದು ವಿದ್ವಾಂಸನಾದವನು ಅಶುಭದಲ್ಲಿ ಮನಸ್ಸನ್ನು ತೊಡಗಿಸಬಾರದು; ಹಾವಿರುವ ಮನೆಯು ವಾಸಕ್ಕೆ ಯೋಗ್ಯವಲ್ಲ, ನಂದ.

ವೈರಾಗ್ಯದಿಂದ ಕಾಡಿಗೆ ಹೋಗಿರುವವನು ಮೋಹಪಡದೆ ಸ್ವಸ್ಥಚಿತ್ತನಾಗಿರುವುದು ಏನು ಆಶ್ಚರ್ಯ? ಆದರೆ ವಿಷಯಗಳ ಮಧ್ಯದಲ್ಲೇ ಇದ್ದು ಅವುಗಳಿಂದ ಪರತಂತ್ರನಾಗದಿರುವುದೀಗ ಧೈರ್ಯ. ಯಾವ ಕೆಲಸ ಮಾಡಲೂ ವೀರ್ಯವಿರಬೇಕು; ವೀರ್ಯವಿಲ್ಲದಿದ್ದರೆ ಸಿದ್ಧಿಯಿಲ್ಲ. ಶತ್ರುಗಳನ್ನು ಯುದ್ಧಭೂಮಿಯಲ್ಲಿ ಇದಿರಿಸುವ ಮುಂಚೆ ವಿಜಯಲಕ್ಷ್ಮಿಯನ್ನು ರಾಜನು ಆರಾಧಿಸುವಂತೆ, ಜಗತ್ತಿನಲ್ಲಿ ವಿರಕ್ತನಾಗಿರುವುದಕ್ಕೆ ಮುಂಚೆ ಯೋಗಕ್ಕೆ ಅನುಕೂಲವಾದ, ನಿರ್ಜನವಾದ, ಸಂಗರಹಿತವಾದ ಅರಣ್ಯದ ದಾರಿಯನ್ನು

ಹಿಡಿಯಬೇಕು. ಅರ್ಥಸಿದ್ಧಿಯಾಗಲು ಧೈರ್ಯಬೇಕು" ಎಂದು ಅರ್ಹತನು ತನ್ನ ಬೋಧೆಯನ್ನು ಮುಗಿಸಿದನು.

ತಥಾಗತನ ಮಾತು ಮುಗಿಯುವ ವೇಳೆಗೆ ನಂದನ ಮನಸ್ಸು ಪರಿಪಕ್ವವಾಯಿತು. ಬುದ್ಧನಿಗೆ ನಮಸ್ಕಾರ ಮಾಡಿ, ಕಾಡಿನ ಕಡೆ ನಡೆದನು. ಎಲ್ಲ ಇಂದ್ರಿಯಗಳನ್ನೂ ಬಿಗಿಹಿಡಿದು, ದೇಹದಲ್ಲಿ ಪ್ರಜ್ಞೆಯನ್ನು ನೆಟ್ಟು, ಮನಸ್ಸಿನ ಕೊಳೆಗಳನ್ನು ಕಳೆದು, ಧೈರ್ಯ ತಂದುಕೊಂಡು, ಚಿತ್ತವನ್ನು ಪ್ರಶಾಂತವಾಗಿ ಮಾಡಿ, ಅದನ್ನು ಒಂದು ಹದಕ್ಕೆ ತಂದು, ವಿಷಯಗಳಲ್ಲಿ ಆಸಕ್ತಿಯನ್ನು ಬಿಟ್ಟು, ಸ್ವಸ್ಥನಾದನು ನಂದ. ತನ್ನ ಪ್ರಿಯೆಯಾಗಿದ್ದವಳು ಧರ್ಮವನ್ನು ಮರೆಸುವ ವಸ್ತುವೆಂದು ತಿಳಿದು, ಅವಳನ್ನು ಮನಸ್ಸಿನಿಂದ ಹೊರದೂಡಿದನು.

ಯೋಗಿಗಳಿಗೆ ಮನಸ್ಸೇ ರಾಜ್ಯ; ಜ್ಞಾನವೇ ಶಾಸನ; ಗುಣಗಳೇ ಮಿತ್ರರು; ದೋಷವೇ ಶತ್ರು; ಮುಕ್ತಿಯೇ ಭೂಮಿ. ಈ ದುಃಖಗಳ ಕಟ್ಟಿನಿಂದ ಪಾರಾಗಲು, ಪರಮವಾದ ಆರ್ಯಮಾರ್ಗವನ್ನು ಕಾಣಲು, ಕಣ್ಣು ತೆರೆದು ನಂದನು ಶಮೆಯನ್ನು ಸಂಪಾದಿಸಿದನು. ಎಲ್ಲದರ ಅನಿತ್ಯತೆ, ಶೂನ್ಯತೆ, ನಿರಾತ್ಮತೆ, ಮತ್ತು ದುಃಖತೆ ಇವುಗಳನ್ನು ತಿಳಿದು, ಕ್ಲೇಶವೃಕ್ಷದ ಬುಡವನ್ನಳ್ಳಾಡಿಸಿದನು. ಹಿಂದೆ ಇರದೆ, ಇಂದು ಇರುವದಿದು ಜಗತ್ತು; ಇಂದು ಇರುವ ಇದು ಮುಂದೆ ಇರುವುದಿಲ್ಲ; ಕಾರಣದಿಂದ ಎದ್ದದ್ದು, ನಾಶವಾಗಬೇಕಾದದ್ದು - ಇದು ಅನಿತ್ಯ. ಜಗತ್ತಿಗೆ ತನ್ನದೇ ಆದ ಕ್ರಿಯಾಶಕ್ತಿಯೆಂಬುದು ಇಲ್ಲ, ಸ್ವತಂತ್ರ ಅಲ್ಲ; ಬೇರೊಂದು ಶಕ್ತಿಯಿಂದ ಪ್ರವೃತ್ತವಾದದ್ದಲ್ಲ; (ಪ್ರತೀತ್ಯಸಮುತ್ಪಾದದ ಪ್ರಕಾರ) ವಿವಿಧ ಕಾರಣಗಳಿಂದ ಉಂಟಾದದ್ದು ಇದೆಲ್ಲವೂ.

ಅದು ನಿಮಿತ್ತವಾಗಿ, ಜಗತ್ತು ಅನಾತ್ಮವಾದುದು. ಜಗತ್ತಿನಲ್ಲಿ ಎಲ್ಲ ಪ್ರವೃತ್ತಿಯೂ ಸಂಸ್ಕಾರಬದ್ಧವಾಗಿ ವಿವಿಕ್ತವಾದದ್ದು; ಅದನ್ನು ಮಾಡುವವರು,

ಚಿತ್ರ 10

ಅನುಭವಿಸುವವರು ಯಾರೂ ಇರರು; ಆದ್ದರಿಂದ ಜಗತ್ತು ಶೂನ್ಯ. ಕಟ್ಟಿಗೆಯಲ್ಲಿರುವ ಬೆಂಕಿಯನ್ನು ಮಥಿಸಿ ಹೊರತೆಗೆಯುವಂತೆ, ಭೂಮಿಯ ಒಳಗಿರುವ ನೀರನ್ನು ಅಗೆದು ಹೊರತೆಗೆಯುವಂತೆ, ನಂದನು ಬಹುಕಷ್ಟಸಾಧ್ಯವಾದ ಲೋಕೋತ್ತರವಾದ ದಾರಿಯನ್ನು ಸಾಧಿಸಿದನು. ಒಳ್ಳೆಯ ಜ್ಞಾನವೆಂಬ ಬಿಲ್ಲನ್ನು ಹಿಡಿದು, ಪ್ರಜ್ಞೆಯೆಂಬ ಕವಚವನ್ನು ತೊಟ್ಟು, ಶುದ್ಧವಾದ ಶೀಲವ್ರತವೆಂಬ ಕುದುರೆಯನ್ನು ಏರಿ ಮನಸ್ಸೆಂಬ ಯುದ್ಧಭೂಮಿಯಲ್ಲಿರುವ ಕ್ಲೇಶಗಳೆಂಬ ಶತ್ರುಗಳನ್ನು ಜಯಿಸಲು ನಂದನು ಸಿದ್ಧನಾದನು. ಎಲ್ಲದರಲ್ಲೂ ಆತ್ಮಭಾವನೆಯನ್ನು ಬಿಟ್ಟು, ನಾಲ್ಕು ಆರ್ಯಸತ್ಯಗಳಲ್ಲಿ ಶ್ರದ್ಧೆನೆಟ್ಟು, ವಿಶುದ್ಧವಾದ ಶೀಲವ್ರತದಿಂದ ಧರ್ಮವನ್ನು ಕಂಡು, ಧರ್ಮದ ಪೂರ್ವದ ಫಲಭೂಮಿಯನ್ನು ಹೊಕ್ಕನು.

ಶಾಂತಿಯಿಂದ ಬರುವ ಧೈರ್ಯದಿಂದಾಗಿ, ಆರ್ಯಸತ್ಯಗಳ ಅರಿವಿನಿಂದಾಗಿ, ಶೀಲವನ್ನು ನೆಟ್ಟಿದ್ದರಿಂದಾಗಿ, ಧರ್ಮದ ಮಾರ್ಗದಲ್ಲಿ ಶ್ರದ್ಧೆಯು ಬೆಳೆಯಿತು. ಹೀಗೆ ನಿಯತವಾದ ಪ್ರವೃತ್ತಿಯು ಉಂಟಾದರೆ ನೈಷ್ಠಿಕವಾದ ಆರ್ಯಧರ್ಮವನ್ನು ಕಾಣುವುದಾಗುತ್ತದೆ. ಶಾಂತವಾದ, ಮಂಗಳವಾದ, ನಿರ್ಜರವಾದ, ವಿರಾಗವಾದ, ನಿಃಶ್ರೇಯಸವಾದ ಧರ್ಮವನ್ನು ಕಂಡರೆ ಕಣ್ಣುಗಳನ್ನು ತೆರೆದು ಬುದ್ಧನನ್ನು ಕಂಡಂತೆ. ರೋಗಿಯು ತನ್ನ ರೋಗವನ್ನು ಪರಿಹರಿಸಿದ ವೈದ್ಯನನ್ನು ಕೃತಜ್ಞತೆಯಿಂದ ಸ್ಮರಿಸುವಂತೆ, ನಂದನು ಮಂಗಳವಾದ ಬೋಧೆಯಿಂದ ಭವವನ್ನು ದಾಟಿದ ಅರ್ಹತನನ್ನು ಚಿತ್ತದೃಷ್ಟಿಯಿಂದ, ಮೈತ್ರಿಯಿಂದ, ಕೃತಜ್ಞತೆಯಿಂದ ಸ್ಮರಿಸಿಕೊಂಡನು.

ದೇಹದ ವಿಷಯದಲ್ಲಿ ನಿಜವಾದ ಸ್ಥಿತಿಯ ಅರಿವು ಅವನಿಗಾಯಿತು, ಜನ್ಮದ ತುದಿಯು ಕಾಣಿಸಿತು; ಸಾವು-ನೋವುಗಳ ಭೀತಿಯು ಹರಿಯಿತು. ನಿರ್ವಾಣವೆಂಬ ನಗರಿಯ ಬಾಗಲಲ್ಲಿ ನಿಂತ ನಂದನು ಯೋಗದಿಂದ 'ಅನಾಗಾಮಿಫಲ'ವನ್ನು ಪಡೆದುಕೊಂಡನು. ಕಾಮಗಳನ್ನು ಬಿಟ್ಟಿದ್ದರಿಂದಾಗಿ,

ವಿವೇಕದಿಂದ ಬೆಳೆದ ಪ್ರೀತಿಯಿಂದ ಸುಖವನ್ನು ಸಾಧಿಸಿಕೊಂಡು ನಂದನು ಧ್ಯಾನದ ಮೊದಲ ಮೆಟ್ಟಿಲಿಗೆ ಅಡಿಯಿಟ್ಟನು.

ದರಿದ್ರನಿಗೆ ಅಪಾರವಾದ ಧನವು ಸಿಕ್ಕಂತೆ, ಕಾಮವೆಂಬ ಬೆಂಕಿಯಿಂದ ಹೊರಗೆ ಬಂದ ನಂದನಿಗೆ ಧ್ಯಾನದಿಂದಾಗಿ ವಿಪುಲವಾದ ಸುಖವು ಲಬ್ಧವಾಯಿತು. ನಿದ್ದೆಯಲ್ಲಿರುವವನಿಗೆ ಶಬ್ದವು ತೊಂದರೆಯನ್ನು ಮಾಡುವಂತೆ ಆಧ್ಯಾತ್ಮ ಸಾಧನೆಯಲ್ಲಿ ತನ್ನ ದೃಷ್ಟಿಯನ್ನು ನೆಟ್ಟವನಿಗೆ ಪ್ರಪಂಚದ ವಿತರ್ಕವೂ; ಪ್ರಸನ್ನವಾಗಿ ನಿಶ್ಚಲವಾದ ನದಿಯ ನೀರನ್ನು ಅಲೆಗಳು ಕ್ಷೋಭೆಮಾಡುವಂತೆ ಏಕಾಗ್ರತೆಯಲ್ಲಿರುವವನನ್ನು ಮನಸ್ಸಿನ ತರಂಗಗಳೂ ಕ್ಷೋಭೆ ಮಾಡುತ್ತವೆ. ಮನಸ್ಸಿನ ವಿತರ್ಕಗಳನ್ನೆಲ್ಲ ಬಿಟ್ಟು ನಂದನು ಸಮಾಧಿಯಿಂದ ಬೆಳೆದ ಪ್ರೀತಿಯಿಂದ ಸುಖವನ್ನು ಸಾಧಿಸಿ ಧ್ಯಾನದ ಎರಡನೆಯ ಮೆಟ್ಟಿಲಲ್ಲಿ ಅಡಿಯಿಟ್ಟನು.

ಚಿತ್ತವು ಶಾಂತವಾದದ್ದರಿಂದ ಹಿಂದೆಂದೂ ಪಡೆಯದಂಥ ಪ್ರೀತಿಯನ್ನು ಗಳಿಸಿದ್ದರೂ, ಈಗ ನಂದನು ಪ್ರೀತಿಯಲ್ಲೂ ದೋಷವನ್ನು ಎಣಿಸಲು ಆರಂಭಿಸಿದನು; ಪ್ರೀತಿಯ ವಸ್ತುವು ಮರೆಯಾದರೆ ಅದು ದುಃಖ ತಾನೆ? ಅದು ಕಾರಣ, ಪ್ರೀತಿ ಕ್ಷಯವಾಗಲು ಸಾಧನೆ ಮಾಡಿ, ಪ್ರೀತಿಯ ವಿರಾಗದಿಂದ ಸುಖವನ್ನು ಹೊಂದಿ ಉಪೇಕ್ಷಕನಾಗಿ ಧ್ಯಾನದ ಮೂರನೆಯ ಮೆಟ್ಟಿಲಲ್ಲಿ ಅಡಿಯಿಟ್ಟನು.

ಇದರಿಂದಾಚೆ ಸುಖದ ಪ್ರವೃತ್ತಿಯೇ ಇಲ್ಲದ್ದರಿಂದ, ಮೈತ್ರಿಯ ಅಂತಿಮ ಪದವಾದದ್ದರಿಂದ ಇದನ್ನು 'ಶುಭಕೃತ್ಸ್ನ' ಭೂಮಿ ಎಂದು ಕರೆದರು. ಆದರೆ ಧ್ಯಾನದಲ್ಲೂ ಮನಸ್ಸಿನ ಓಡಾಟ ಇಲ್ಲವೇ? ಮನಸ್ಸು ಚಲಿಸಿದಂತೆಲ್ಲ ದುಃಖ ಇದ್ದೇ ಇದೆ. ಸುಖದುಃಖ ಹೋಗಬೇಕೆಂದರೆ ಮನೋವಿಕಾರದ ಈ ಕಾರಣಗಳು ಹೋಗಬೇಕು. ಹೀಗೆ ಧ್ಯಾನದಲ್ಲೂ ದೋಷ ಕಂಡು ನಂದನು ಸುಖ-ದುಃಖ ಎರಡೂ ಇಲ್ಲದ ನಾಲ್ಕನೆಯ ಮೆಟ್ಟಿಲನ್ನು ಹತ್ತಿದನು.

ಇಲ್ಲಿ ದುಃಖ, ಸುಖ, ಜ್ಞಾನ ಯಾವುದೂ ಇಲ್ಲವಾದ ಕಾರಣ ಇದನ್ನು "ಉಪೇಕ್ಷಾಸ್ಮೃತಿಪಾರಿಶುದ್ಧಿ" ಎನ್ನುತ್ತಾರೆ. ಈ ನಾಲ್ಕನೆಯ ಹಂತದಲ್ಲಿ ನಿಂತ ನಂದನು ಜಯಿಸಿದ ರಾಜ್ಯಗಳನ್ನು ಜಯಿಸಲು ಉದ್ಯುಕ್ತನಾದ ರಾಜನಂತೆ ಅರ್ಹತಪದವನ್ನು ಸಾಧಿಸಲು ನಿಶ್ಚಯಿಸಿದನು. ಧೈರ್ಯವಾಗಿ ಪ್ರಜ್ಞೆ ಎಂಬ ಕತ್ತಿಯಿಂದ ಕಡೆಯ ಬಂಧನಗಳನ್ನೆಲ್ಲ ಕಡಿದು ನಿಂತನು. ಬೋಧ್ಯಂಗಗಳ ಸಹಾಯದಿಂದ ಮನಸ್ಸಿನ ಅನುಶಯಗಳನ್ನೆಲ್ಲ ನಾಶಮಾಡಿ, ಅಷ್ಟಾಂಗವೆಂಬ ನೌಕೆಯಿಂದ ದುಃಖದ ಸಮುದ್ರವನ್ನು ದಾಟಿದನು. ಅವನಲ್ಲಿ ಉತ್ಸಾಹವು ಅಳಿಯಿತು, ಪ್ರಣಯವು ನಾಶವಾಯಿತು, ಆಶೆಯು ಮಾಯವಾಯಿತು, ಮದವು ಅಡಗಿತು, ಕಾಮವು ಇಲ್ಲವಾಯಿತು. ಎಂದರೆ ಅರ್ಹತನಾದನು.

"ಬೋಧೆಯೇನೋ ಬುದ್ಧನದು; ಆದರೆ ಪರಾಕ್ರಮವು ತನ್ನದು. ಪ್ರಶಾಂತವಾದ ಮನಸ್ಸಿನಿಂದ, ಜೀವನದಲ್ಲಿ ಕೃತಕೃತ್ಯನಾದ ತೃಪ್ತಿಯಿಂದ ನಂದನು ತನಗೆ ತಾನೇ ಅಂದುಕೊಂಡನು "ಕರುಣಾಮಯನಾದ ಸುಗತನು ನನ್ನ ಹಿತವನ್ನು ಬಯಸಿ, ನನ್ನ ದುಃಖಗಳನ್ನೆಲ್ಲ ಹೊರದೂಡಿ, ಶುಭದಲ್ಲಿ ನನ್ನನ್ನು ನಿಲ್ಲಿಸಿದ್ದಾನೆ. ನಾನು ಅನಾರ್ಯವಾದ ದೇಹದ ಮೋಹದಲ್ಲಿ ತೊಳಲಿ, ಅಲ್ಲೇ ಇರಲು ಮೊಂಡುಹಾಕಿ ನಿಂತಿದ್ದಾಗ, ಮದಿಸಿದ ಆನೆಯನ್ನು ಅಂಕುಶದಿಂದ ದಾರಿಗೆಳೆಯುವಂತೆ ನನ್ನನ್ನು ಎಳೆದಿದ್ದಾನೆ. ಮಹಾಕಾರುಣಿಕನಾದ ಅವನ ಆದೇಶದಂತೆ ನಾನು ನನ್ನ ಹೃದಯದಿಂದ ಕಾಮದ ಬಾಣವನ್ನು ಕಿತ್ತು ಬಿಸಾಡಿದ್ದೇನೆ. ಈಗಲೇ ನನಗೆ ಇಷ್ಟು ಸುಖ, ಶಾಂತಿ ಒದಗಿರುವಲ್ಲಿ ಸರ್ವಕ್ಷಯವಾದ ನಿರ್ವಾಣವನ್ನು ಪಡೆದಮೇಲೆ ಹೇಳುವುದೇನು? ಬೆಂಕಿಯನ್ನು ನೀರು ಆರಿಸುವಂತೆ ಕಾಮವನ್ನು ಧೃತಿಯಿಂದ ಶಮನಮಾಡಿದ್ದೇನೆ; ಸಂತೋಷದ ದೊಡ್ಡ ನದಿಯೇ ಬಂದಂತಾಗಿದೆ. ನನಗೆ ಪ್ರಿಯವಾದುದು ಯಾವುದೂ ಇಲ್ಲ, ಅಪ್ರಿಯವಾದುದೂ ಇಲ್ಲ; ಅನುರೋಧವೂ ಇಲ್ಲ, ವಿರೋಧವೂ ಇಲ್ಲ; ಈ ದ್ವಂದ್ವಗಳನ್ನು ದಾಟಿದ ಮೇಲೆ ನಾನು ಸುಖಿಯಾಗಿದ್ದೇನೆ. ಮಹಾಭಯದಿಂದ ಸುರಕ್ಷಿತವಾದ ಸ್ಥಳಕ್ಕೆ

ಬಂದಂತೆ, ದೊಡ್ಡ ಸಮುದ್ರದಿಂದ ದಡವನ್ನು ಸೇರಿದಂತೆ, ಕಗ್ಗತ್ತಲೆಯಿಂದ ಬೆಳಕಿಗೆ ಬಂದಂತೆ, ರೋಗದಿಂದ ಆರೋಗ್ಯಕ್ಕೆ ಬಂದಂತೆ, ಬರಗಾಲದಿಂದ ಸಮೃದ್ಧಿಯಾದ ಕಾಲಕ್ಕೆ ಬಂದಂತೆ, ನಾನು ಉತ್ತಮವಾದ ಶಾಂತಿಗೆ ಬಂದಿದ್ದೇನೆ. ಅರ್ಹತನಾದ ತಥಾಗತನ ಕೃಪೆ. ವ್ಯಸನದ ಕೊಂಪೆಯಾದ ಸಂಸಾರವನ್ನು ದಾಟಿ ಶೋಕವಿಲ್ಲದ, ತಮಸ್ಸಿಲ್ಲದ, ನೈಷ್ಠಿಕವಾದ, ಶಾಂತವಾದ ಧರ್ಮವನ್ನು ಸೇರಲು ಕಾರಣನಾದ ಮಹಾಕಾರುಣಿಕ, ಮಹರ್ಷಿ, ಮಹಾಭಿಷಕ್, ತ್ರಾತನಾದ ಸಂಬುದ್ಧನಿಗೆ ಮತ್ತೆ ಮತ್ತೆ ಪ್ರಣಾಮಗಳು."

ಬ್ರಾಹ್ಮಣ ಬಾಲಕನಿಗೆ ವೇದದಲ್ಲಿ ಪಾಂಡಿತ್ಯವು ಬಂದರೆ, ಶತ್ರುಸೈನ್ಯವನ್ನು ರಾಜನು ಜಯಿಸಿದರೆ ಯಾವ ಕೃತಾರ್ಥತೆಯ ಅರಿವಾಗುವುದೋ ಅದು ನಂದನಿಗಾಯಿತು. ನಂದನು ಅನಂತರ ಗುರುಭಕ್ತಿಯಿಂದ ಬುದ್ಧನ ಬಳಿಗೆ ಸಾರಿ ತನ್ನ ಕಾರ್ಯಸಿದ್ಧಿಯನ್ನು ನಿವೇದಿಸಿದನು: "ನನ್ನ ಹೃದಯದಲ್ಲಿದ್ದ ಬಾಣವನ್ನು ತೆಗೆದಿದ್ದೀರಿ, ಗುರುವೇ; ದಾರಿ ತಪ್ಪಿದವನಿಗೆ ದಾರಿಯನ್ನು ತೋರಿಸಿದ್ದೀರಿ. ಮದದಲ್ಲಿ ರುಚಿಯಾಗಿದೆಯೆಂದು ಕುಡಿದ ಕಾಮದ ವಿಷಕ್ಕೆ ಪ್ರತೀಕಾರಮಾಡಿದ್ದೀರಿ. ಮಾಡಬೇಕಾದ ಕೆಲಸವನ್ನು ಪೂರ್ತಿಯಾಗಿ ಮಾಡಿದ್ದಾಗಿದೆ; ಲೋಕದಲ್ಲಿದ್ದರೂ ಲೋಕದ ಧರ್ಮಗಳಿಂದ ದೂರಾಗಿದ್ದೇನೆ. ನಿಮ್ಮ ಮೈತ್ರಿಯ ಸ್ತನಗಳಿಂದ ಧರ್ಮದ ಹಾಲನ್ನು ಕುಡಿದು ತೃಪ್ತನಾದ ಕರು ನಾನು. ಇಂದ್ರಿಯಗಳ ಎಲ್ಲ ಅವಸ್ಥೆಗಳಲ್ಲೂ ಅವುಗಳ ಉದಯ ಹಾಗೂ ವ್ಯಯವನ್ನು ಕಂಡು ಈ ಅನಿತ್ಯವಾದ, ನಿರಾತ್ಮಕವಾದ, ದುಃಖರೂಪವಾದ ಅವುಗಳಲ್ಲಿ ನನ್ನ ಆಸಕ್ತಿ ಇಲ್ಲ. ಸಮಜನನ್ಮನಿಷ್ಠವಾದ ಲೋಕವು ನಿಃಸಾರವಾದದ್ದು, ಸುಳ್ಳಾದದ್ದು; ಅವುಗಳಲ್ಲಿ ನನ್ನ ಪ್ರವೃತ್ತಿ ಇಲ್ಲ. ಭವದಿಂದ ಮುಕ್ತನಾದವನು ನಾನು, ಭಗವನ್" ಎಂದು ನಮ್ರನಾಗಿ ನಮಸ್ಕರಿಸಿದನು.

ಪ್ರಮಾದದ ಕಟ್ಟಿನಿಂದ ಹೊರಬಂದ ನಂದನ ಧೈರ್ಯ, ಶ್ರದ್ಧೆಯ ಮಾತುಗಳನ್ನು ಕೇಳಿ ಅರ್ಹತನಾದ ಬುದ್ಧನು "ಧರ್ಮದಲ್ಲಿ ನಿಂತ ನೀನು



ಚಿತ್ರ 11

ನನ್ನ ಕಾಲುಗಳಿಗೆ ತಲೆಬಾಗಿಸುವುದು ಅನುಚಿತ, ನಂದ. ಮೇಲೇಳು, ಅಭ್ಯರ್ಚನೆಯಾಗಲೀ, ಪ್ರಣಾಮವಾಗಲೀ ಸಲ್ಲದು. ನಿನ್ನನ್ನು ನೀನು ಗೆದ್ದಿರುವ ನಿಮಿತ್ತ, ನಿನ್ನ ಪ್ರವ್ರಜನ ಸಾಧುವಾದುದು. ನಡೆ-ನುಡಿ-ಮನಸ್ಸುಗಳಲ್ಲಿ ಉತ್ತಮವಾದ ಶುಚಿಯನ್ನು ಸಂಪಾದಿಸಿದ್ದೀ. ನಿನ್ನ ದೃಷ್ಟಿಯು ವಿಷಯಗಳಿಂದ ತಿರುಗಿದ್ದರೆ, ಮನಸ್ಸು ಮೋಕ್ಷದ ಕಡೆಗೆ ಒಲಿದಿದ್ದರೆ, ಆ ಧೈರ್ಯವು ನಿಜವಾಗಿ ಶ್ಲಾಘನೀಯವಾದುದು. ಮಾರನನ್ನು ಗೆಲ್ಲುವ ಶೌರ್ಯವು ಸಾಮಾನ್ಯವಲ್ಲ, ನಂದ. ರಾಗದ ಬೆಂಕಿಯಿಂದ ಬೆಂದ ಜನಕ್ಕೆ ಶಾಂತಿಯೆಲ್ಲಿಯದು? ಆಶೆ ಅಡಗಿ ರಾಗದ ಬೆಂಕಿಯನ್ನು ಆರಿಸಿದ ಜನ ಮಾತ್ರ ಸುಖವಾಗಿರಬಲ್ಲರು. ದ್ರವ್ಯದ ಮೇಲಿನ ಮದದಿಂದ ದುಃಖಪಡುತ್ತಿರುವವನು ಆಸೆಯು ನಾಶವಾದರೆ ನಿಜವಾಗಿ ಸಮೃದ್ಧಿಯ ಸುಖವನ್ನು ಅನುಭವಿಸುತ್ತಾನೆ. ನಂದನು ಭಿಕ್ಷುವಾಗಿ, ವಿನೀತನಾಗಿ, ಶಾಂತನಾಗಿರುವುದನ್ನು ನೋಡುವ ಇಷ್ಟ ನನಗಿತ್ತು; ಇಂದು ಅದು ಫಲಿಸಿತು. ಶ್ರೇಷ್ಠವಾದ ಗುಣಗಳೇ ಆಭರಣ; ಶ್ರೇಯಸ್ಸಿನಲ್ಲಿ ನಿರತವಾದ ಶುದ್ಧಿಯೇ ಬುದ್ಧಿ; ಪ್ರಜ್ಞೆಯ ಕಣ್ಣೇ ಕಣ್ಣು. 'ದುಃಖ ನನಗೆ ಬೇಡ, ಸುಖವೇ ಇರಲಿ' ಎನ್ನುವ ಆಸೆ ಸಹಜವಾದದ್ದು; ಆದರೆ ಅದನ್ನು ಸಾಧಿಸುವ ಬಗೆ ಹೇಗೆ ಎಂಬುದನ್ನು ಜನ ಅರಿಯರು. ನೀನು ಕಷ್ಟಸಾಧ್ಯವಾದ ಆ ಬಗೆಯನ್ನು ಅರಿತು ಸುಖವನ್ನು ಸಾಧಿಸಿದ್ದೀ" ಎಂದನು.

ಈ ವೇಳೆಗಾಗಲೇ ನಂದನ ಬುದ್ಧಿಯು ಸ್ಥಿರವಾಗಿದ್ದಿತು. ಹೊಗಳಿಕೆಗಾಗಲೀ, ತೆಗಳಿಕೆಗಾಗಲೀ ಅವನ ಮನಸ್ಸು ಜೋಲು ಬಿಡುವಂತಿರಲಿಲ್ಲ. "ಭಂತೇ, ಕಾಮದ ಕೆಸರಿನಲ್ಲಿ ಒದ್ದಾಡುತ್ತಿದ್ದ ನನ್ನನ್ನು ಕರುಣೆಯಿಂದ ಮೇಲೆತ್ತಿದವನು ನೀನು. ನೀನೇ ನನ್ನ ಗುರು, ಅಗ್ರಜ, ತಾಯಿ, ತಂದೆ ಎಲ್ಲವೂ. ಭ್ರಷ್ಟನಾಗಿದ್ದವನನ್ನು ಕೃತಾರ್ಥನನ್ನಾಗಿ ಮಾಡಿರುವ ಹಿತಕಾಮಿ ನೀನು. ಶಾಂತನಾಗಿದ್ದವನಿಗೆ, ತೃಪ್ತನಾದವನಿಗೆ, ತತ್ತ್ವ ತಿಳಿದವನಿಗೆ, ವಿಮರ್ಶಕನಿಗೆ ವಿವೇಕವೇ ಸುಖ; ಮದಮೋಹ ಇಲ್ಲದವನಿಗೆ, ಅಸಕ್ತಬುದ್ಧಿಯುಳ್ಳವನಿಗೆ ವೈರಾಗ್ಯವೇ ಸುಖ. ಅದು ನಿಮಿತ್ತ ತತ್ತ್ವವನ್ನು

ತಿಳಿದು, ದ್ವೇಷವನ್ನು ಬಿಟ್ಟು, ಶಾಂತಿಯನ್ನು ಪಡೆದುಕೊಂಡು ನಾನು ಜನದಲ್ಲಿ, ಅಪ್ಸರೆಯರಲ್ಲಿ, ದೇವತೆಗಳಲ್ಲಿ ಆಸಕ್ತಿಯನ್ನು ಬಿಟ್ಟಿದ್ದೇನೆ. ಶಾಂತಿಯಿಂದ ಬಂದ ಶುಚಿಯಾದ ಈ ಸುಖವನ್ನು ಅನುಭವಿಸಿದ ನನಗೆ ಕಾಮದಿಂದ ಎದ್ದ ಸುಖಗಳಲ್ಲಿ ಆಸೆ ಇಲ್ಲ. ಕಣ್ಣಿಲ್ಲದೆ ಒದ್ದಾಡುತ್ತಿರುವ ಈ ಜಗತ್ತಿನಲ್ಲಿ ಸುಖ ಎಲ್ಲಿಯದು? ಭವವೆಂಬ ಸಮುದ್ರದಿಂದ ದಾಟಿಸಿದ್ದೀಯೆ, ಭಗವನ್!" ಎಂದನು.

ಆಗ ಬುದ್ಧದೇವನು "ಸೌಮ್ಯ, ನೀನು ಕಾಡನ್ನು ದಾಟಿ, ಸಾಧನವನ್ನು ಮುಗಿಸಿ, ಫಲವನ್ನು ಪಡೆದಿದ್ದೀ. ಮನಸ್ಸು ಶಾಂತವಾದ ಯೋಗಿಯು ಸತ್ಯವನ್ನು ಕಂಡರೂ ಬುದ್ಧನನ್ನು, ನರದಮ್ಯಸಾರಥಿಯನ್ನು ತಿಳಿಯಲು ಸಾಧ್ಯವಾಗಲಾರದು; ಇನ್ನು ಸಾಮಾನ್ಯ ಜನರ ವಿಷಯ ಹೇಳುವುದೇನು? ರಜಸ್ಸು-ತಮಸ್ಸುಗಳಿಂದ ಮುಕ್ತನಾದ ನೀನು ಕೃತಜ್ಞನಾಗಿರುವುದು ಸಹಜವೇ. ಜಗತ್ತಾದರೋ ರಜಸ್ಸಿನಿಂದ ಬದ್ಧವಾದದ್ದು; ಅಲ್ಲಿ ಕೃತಜ್ಞತೆಯನ್ನು ಕಾಣುವುದು ಕಷ್ಟ. ಮಾಡಬೇಕಾದ ಕಾರ್ಯವನ್ನು ಮಾಡಿದ್ದೀಯೆ, ನಂದ; ಕೊನೆಯ ಸ್ಥಿತಿಯನ್ನು ಮುಟ್ಟಿದ್ದೀಯೆ, ಮುಂದೆ ನೀನು ಮಾಡಬೇಕಾದದ್ದೇನೂ ಇಲ್ಲ.

ದುಃಖದಿಂದ ಬಳಲುವ ಪ್ರಾಣಿಗಳಲ್ಲಿ ದಯೆಯಿಂದ ಅವುಗಳ ಮುಕ್ತಿಗಾಗಿ ಶ್ರಮಿಸಬೇಕು, ನಂದ. ಲೌಕಿಕವಾದ ಕರ್ಮಗಳನ್ನೇ ಮಾಡುತ್ತ ಇಲ್ಲಿಯೇ ಫಲಕ್ಕಾಶಿಸುವ ಜನ ಅಧಮರು; ತಮ್ಮ ಮುಕ್ತಿಗಾಗಿ ಮಾತ್ರ ಶ್ರಮಿಸುವವರು ಮಧ್ಯಮರು; ನೈಷ್ಠಿಕವಾದ ಧರ್ಮ ಹಿಡಿದು, ತಮ್ಮ ಶ್ರಮವನ್ನು ನೆನೆಸಿಕೊಂಡು ಪರರ ಶಾಂತಿಗಾಗಿ ಪ್ರಯತ್ನಪಡುವವರು ಉತ್ತಮರು. ನೀನು ಮಾಡಬೇಕಾದದ್ದು ಮುಗಿಯಿತು, ನಂದ; ಬೇರೆಯವರ ಕಾರ್ಯವನ್ನು ಯೋಚಿಸು. ಕತ್ತಲೆಯಲ್ಲಿ ದೀಪವನ್ನು ಹಿಡಿದಂತೆ, ತಮಸ್ಸಿನಲ್ಲಿ ಭ್ರಮಿಸುತ್ತಿರುವ ಜೀವಿಗಳಿಗೆ ಧರ್ಮದ ದೀಪವನ್ನು ಹಿಡಿ. ನೀನು ಧರ್ಮ ಹೇಳುತ್ತಿರುವುದನ್ನು ನೋಡಿ ಜನ ಅನ್ನಲಿ - ಏನಾಶ್ಚರ್ಯ! ಕಾಮುಕನಾಗಿದ್ದ ಈ ನಂದನು

ವೈರಾಗ್ಯವನ್ನು ಹೇಳುತ್ತಿದ್ದಾನೆ? ಎಂದು. ವಿಷಯಗಳಿಂದ, ಆಸೆಗಳಿಂದ ದೂರಾದ, ಸ್ಥಿರವಾದ ಬುದ್ಧಿಯುಳ್ಳ ನಿನ್ನನ್ನು ನೋಡಿ ನಿನ್ನ ವಧುವೂ ಕೂಡ ನಿನ್ನನ್ನೇ ಅನುಸರಿಸಿ, ಸ್ತ್ರೀಯರಿಗೂ ವೈರಾಗ್ಯ ಹೇಳುವಳು."

ಭಗವಂತನಾದ ಬುದ್ಧನು ಹೀಗೆ ಹೇಳಿ ಮುಗಿಸಿದಾಗ, ನಂದನು ಅವನ ಪಾದಗಳಿಗೆ ತಲೆಮುಟ್ಟಿಸಿ ನಮಸ್ಕಾರಮಾಡಿ, ಸ್ವಸ್ಥನಾಗಿ, ಶಾಂತ ಹೃದಯನಾಗಿ, ಮದವನ್ನು ಬಿಟ್ಟ ಆನೆಯಂತೆ, ಪರಮಕಾರುಣಿಕನಾದ ಅರ್ಹತನ ಪಕ್ಕಕ್ಕೆ ಸರಿದು ನಿಂತನು.

ಕಡೆಯಲ್ಲಿ ಕವಿಯ ಮಾತುಗಳು ಇವು -

ಈ ಕಾವ್ಯವು ಶೃಂಗಾರಪ್ರಧಾನವಾದುದಲ್ಲ; ಮುಕ್ತಿಯನ್ನು ಅಧಿಕರಿಸಿ, ಶಾಂತಿಗಾಗಿ ಬರೆದದ್ದು. ಕುಡಿಯುವ ಔಷಧಿ ಕಹಿಯಾಗಿದ್ದಾಗ ಜೇನುತುಪ್ಪವನ್ನು ಸೇರಿಸಿ ಕೊಡುವಂತೆ, ನೀರಸವಾದ ವೈರಾಗ್ಯವು ಬಹುಜನಕ್ಕೆ ಹಿಡಿಸದೆಂದು ಕಾವ್ಯೋಪಚಾರ ಮಾಡಿದ್ದೇನೆ; ಅದು ಹೃದಯವನ್ನು ಹಿಡಿದೀತು. ಜನರು ಸಾಮಾನ್ಯವಾಗಿ ವಿಷಯಲೋಲುಪರೆಂಬುದನ್ನು ತಿಳಿದು, ಕಾವ್ಯದ ನೆಪವನ್ನು ಹಿಡಿದು ಮುಕ್ತಿಯ ವೈಶಿಷ್ಟ್ಯವನ್ನು ಹೇಳಿದ್ದೇನೆ.

ಹೀಗೆ ಸುವರ್ಣಾಕ್ಷಿಯ ಮಗ, ಸಾಕೇತದ ಭಿಕ್ಷು ಆರ್ಯ-ಭದಂತ ಅಶ್ವಘೋಷನೆಂಬ ಮಹಾವಾದಿಯ ಕಾವ್ಯವು ಮುಗಿಯುತ್ತದೆ.

"ಆರ್ಯಸುವರ್ಣಾಕ್ಷೀಪುತ್ರಸ್ಯ ಸಾಕೇತಸ್ಯ
ಭಿಕ್ಷೋರಾಚಾರ್ಯಭದಂತಾಶ್ವಘೋಷಸ್ಯ
ಮಹಾಕವೇರ್ಮಹಾವಾದಿನಃ ಕೃತಿರಿಯಂ"

ಮಹಾಕವಿ ಅಶ್ವಘೋಷ

ಸಂಸ್ಕೃತ ವಾಙ್ಮಯದಲ್ಲಿ ಎರಡು ಸಾವಿರವರ್ಷಗಳಷ್ಟು ಹಿಂದೆಯೇ ಕಾಳಿದಾಸನಂಥ ಮಹಾಕವಿಗೂ ಮಾರ್ಗದರ್ಶಿಯೆನಿಸಿ, ವಾಲ್ಮೀಕಿಯ ನಂತರ ಪೂರ್ವ ಸೂರಿಯೆನಿಸಿ ಮೆರೆದವನು ಅಶ್ವಘೋಷ. ಅವನ 'ಬುದ್ಧಚರಿತ'ವು ಸಂಸ್ಕೃತ ಕಾವ್ಯಪರಂಪರೆಯುಲ್ಲಿ ನಾಂದೀಮುಖದಲ್ಲೇ ನಿಂತಿದೆ. ಅವನ ಗ್ರಂಥಗಳು ಚೀಣೀಭಾಷೆಗೂ, ಟಿಬೆಟನ್ ಭಾಷೆಗೂ ಪರಿವರ್ತನೆಗೊಂಡು ಏಳೆಂಟುನೂರು ವರ್ಷಗಳಷ್ಟು ಹಿಂದೆಯೇ ಉಳಿದಿವೆ. ಬೌದ್ಧ ಮಹಾಯಾನ ಪ್ರಸ್ಥಾನದ ಕಾರಣಪುರುಷರಲ್ಲಿ ಅಶ್ವಘೋಷ ಒಬ್ಬನು. ಚೀಣ ಮತ್ತು ಟಿಬೆಟ್ ದೇಶಗಳಲ್ಲಿ ಬಳಕೆಯಲ್ಲಿರುವ ಗುರುಪರಂಪರೆಯ ಪಟ್ಟಾವಳಿ ಇವನು ನಾಗಾರ್ಜುನ, ಆರ್ಯದೇವ ಇವರಿಗೂ ಪೂರ್ವ ಸೂರಿಯೆಂದು ತಿಳಿಸುತ್ತದೆ. ಚೀಣೀ ಸಾಹಿತ್ಯದಲ್ಲಿ ಅವನ ಜೀವನಚರಿತೆ ಪ್ರಸಿದ್ಧವಾದ ಗ್ರಂಥ. ಅವನು ಹೆಸರಾಂತ ದಾರ್ಶನಿಕ, ಪ್ರತಿಭಾವಂತನಾದ ಕವಿ, ಸಂಗೀತದಲ್ಲೂ ಎತ್ತಿದಕೈ ಆಗಿದ್ದವನು.

ಪ್ರತಿಗಳಿಗೆ ಸಂಪರ್ಕಿಸಬೇಕಾದ ವಿಳಾಸ :
ಪುಸ್ತಕ ಭಾರತಿ, ಭಾರತೀಯ ವಿದ್ಯಾಭವನ
ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.

ಬೆಲೆ ರೂ. 24/-